# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ದಾವಣಗೆರೆ ಬುಧವಾರ, ಜನವರಿ 19, 2022

ಸಂಪುಟ : 48 ಸಂಚಿಕೆ : 249 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


# ಹಾಲಿನ ದರ ಹೆಚ್ಚಳಕ್ಕೆ ತೀರ್ಮಾನ

## ಲೀ.ಗೆ 3ರೂ. ಹೆಚ್ಚಿಸಲು ಅನುಮತಿಗಾಗಿ ಸಿಎಂಗೆ ಮನವಿ



ಬೆಂಗಳೂರು, ಜ.18 - ಹಾಲಿನ ದರವನ್ನು ಪ್ರತಿ ಲೀಟರ್‌ಗೆ 3 ರೂ. ಹೆಚ್ಚಳ ಮಾಡಲು ಕರ್ನಾಟಕ ಹಾಲು ಒಕ್ಕೂಟ ತೀರ್ಮಾನಿಸಿದೆ.

ಒಕ್ಕೂಟದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಲು ದರ ಹೆಚ್ಚಳ ಮಾಡಲು ತೆಗೆದುಕೊಂಡಿರುವ ತೀರ್ಮಾನಕ್ಕೆ ಮುಖ್ಯಮಂತ್ರಿಗಳ ಹಸಿರು ನಿಶಾನೆಗೆ ಕಾಯಲಾಗಿದೆ.

ಒಕ್ಕೂಟದ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಒಕ್ಕೂಟದ ನಿರ್ಧಾರವನ್ನು ತಿಳಿಸಿದ್ದಲ್ಲದೆ, ಪ್ರತಿ ಲೀಟರ್‌ಗೆ 3 ರೂ. ದರ ಹೆಚ್ಚಳ ಮಾಡಲು ಅನುಮತಿ ನೀಡುವಂತೆ ಕೋರಿದ್ದಾರೆ.

ಹೆಚ್ಚಳ ಮಾಡುವ ಹಣದಲ್ಲಿ ಬಹುಪಾಲನ್ನು ಹೈನುಗಾರಿಕೆ ಮಾಡುವ ರೈತರಿಗೆ ನೀಡಲಾಗುವುದು ಎಂಬುದನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾರೆ.

ರಾಷ್ಟ್ರದ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಹಾಲಿನ ದರ ರಾಜ್ಯದಲ್ಲಿ ಅತೀ ಕಡಿಮೆ ಇದೆ. ಪ್ರತಿ ಲೀಟರ್‌ಗೆ 3 ರೂ ದರ ಏರಿಕೆ ಮಾಡಿದರೆ ರೈತರಿಗೂ ಅನುಕೂಲ, 14 ಒಕ್ಕೂಟಗಳ ಉಳಿವಿಗೂ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ನಿರ್ವಹಣೆ, ಉತ್ಪಾದನಾ ವೆಚ್ಚ, ನೌಕರರ ಸಂಬಳ ಸೇರಿದಂತೆ ಹಲವು ಕಾರಣಗಳನ್ನು ನೀಡಿ, ಬೆಲೆ ಏರಿಕೆಗೆ ಪ್ರಸ್ತಾಪ ಸಲ್ಲಿಸಲಾಗಿದೆ. ಮೂರು ವರ್ಷಗಳಿಂದ ಹಾಲಿನ ದರ ಕಾಲಾನುಕಾಲಕ್ಕೆ ಹೆಚ್ಚಳ ಮಾಡದಿರುವುದರಿಂದ (2ನೇ ಪುಟಕ್ಕೆ)

# ಲಸಿಕೆ ಕೊಡಿ, ಹಳ್ಳಿಗಳಿಗೆ ಹೊರಡಿ

**ವೈದ್ಯರ ನಡೆ ಹಳ್ಳಿ ಕಡೆ ಕಾರ್ಯಕ್ರಮಕ್ಕೆ ಸಿಎಂ ಬೊಮ್ಮಾಯಿ ಸೂಚನೆ**

ಬೆಂಗಳೂರು, ಜ. 18 – ಲಸಿಕೆ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳು ಈ ತಿಂಗಳ ಅಂತ್ಯದೊಳಗೆ, ರಾಜ್ಯದ ಸರಾಸರಿ ಮಟ್ಟಕ್ಕೆ ತಲುಪುವಂತೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸಿದ ಅವರು, ಗ್ರಾಮದ ಕಟ್ಟ ಕಡೆಯ ಮನೆಗೂ ಔಷಧ ಕಿಟ್‌ಗಳನ್ನು ತಲುಪಿಸಬೇಕು. ಹೋಂ ಐಸೋಲೇಷನ್‌ನಲ್ಲಿರುವವರಿಗೆ ಸರಿಯಾದ ಚಿಕಿತ್ಸೆ ನೀಡಬೇಕು ಎಂದು ಸೂಚಿಸಿದರು.

ಶೇ.94ರಷ್ಟು ಸೋಂಕಿತರು ಹೋಂ ಐಸೋಲೇಷನ್‌ನಲ್ಲಿ ಇದ್ದಾರೆ. ಅವರಿಂದ ಮನೆಯವರಿಗೆ ಸೋಂಕು ಹರಡದಂತೆ ಕ್ರಮ ತೆಗೆದುಕೊಳ್ಳಬೇಕು. ಸೋಂಕಿತರ ಮನೆಯವರಿಗೂ ಪರೀಕ್ಷೆ ಮಾಡಿ ಅಗತ್ಯವಿದ್ದರೆ ಚಿಕಿತ್ಸೆ ನೀಡಬೇಕೆಂದು ಮುಖ್ಯಮಂತ್ರಿ ತಿಳಿಸಿದ್ದಾರೆ. 'ವೈದ್ಯರ ನಡೆ ಹಳ್ಳಿ ಕಡೆ' ಕಾರ್ಯಕ್ರಮ ಪ್ರಾರಂಭಿಸಿ ವೈದ್ಯರು ಹಾಗೂ ಎ.ಎನ್.ಎಂ.ಗಳು ಮನೆ ಮನೆ ಭೇಟಿ ಮಾಡಬೇಕು. ಇದಕ್ಕಾಗಿ ವಿಶೇಷ ಎಸ್.ಒ.ಪಿ. ರೂಪಿಸಲಾಗುವುದು ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ.

ಜಿಲ್ಲಾಧಿಕಾರಿಗಳು, ಡಿ.ಹೆಚ್.ಒ.ಗಳು ತಾಲ್ಲೂಕುಗಳಿಗೆ ಭೇಟಿ ನೀಡಿ ಔಷಧ ವಿತರಣೆಯ ಬಗ್ಗೆ ಪರಿಶೀಲಿಸಬೇಕು. ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಮೇಲ್ವಿಚಾರಣೆ ಕೈಗೊಳ್ಳಲು ಸೂಚಿಸಲಾಯಿತು.

ರಾಜ್ಯದಲ್ಲಿ ಪರೀಕ್ಷೆಗಳು ಹೆಚ್ಚಾಗಿರುವುದರಿಂದ ಪ್ರಕರಣಗಳು ಹೆಚ್ಚಿದ್ದರೂ (4ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಕಾಡದ ಮೂರನೇ ಅಲೆ

## ಶೇ.99ರಷ್ಟು ಜನರು ಗುಣಮುಖ, ಒಂಭತ್ತು ಜನ ಮಾತ್ರ ಆಕ್ಸಿಜನ್‌ನಲ್ಲಿ

ದಾವಣಗೆರೆ, ಜ. 18 - ಕೊರೊನಾ ಮೂರನೇ ಅಲೆಯಲ್ಲಿ ಜಿಲ್ಲೆಯಲ್ಲಿ ಪ್ರಸಕ್ತ 1,036 ಸಕ್ರಿಯ ಸೋಂಕಿತರನ್ನು ಗುರುತಿಸಲಾಗಿದೆ. ಆದರೆ, ಸರ್ಕಾರಿ ಹಾಗೂ ಖಾಸಗಿ ಸೇರಿದಂತೆ ಕೇವಲ ಒಂಭತ್ತು ಜನ ಮಾತ್ರ ಆಕ್ಸಿಜನ್‌ನಲ್ಲಿ ಇದ್ದಾರೆ. ಬಹುತೇಕ ಸೋಂಕಿತರು ಲಕ್ಷಣ ರಹಿತರಾಗಿದ್ದರೆ, ಸೋಂಕಿತರು ತ್ವರಿತವಾಗಿ ಗುಣವಾಗುತ್ತಿದ್ದಾರೆ.

ಕಳೆದ ಬಾರಿ ಬಂದಿದ್ದ ಡೆಲ್ಟಾ ಅಲೆಯಲ್ಲಿ ಉಸಿರಾಟದ ಸಮಸ್ಯೆ ಸಾಕಷ್ಟು ಜನರಲ್ಲಿ ಕಂಡು ಬಂದಿತ್ತು. ಆದರೆ, ಓಮಿಕ್ರಾನ್ ಅಲೆ ಜಿಲ್ಲೆಯಲ್ಲಿ ಹೆಚ್ಚೇನೂ ಪರಿಣಾಮ ಬೀರಿದ್ದು ಕಂಡು ಬಂದಿಲ್ಲ. ಮೂರನೇ ಅಲೆಯಲ್ಲಿ ಮಂಗಳವಾರ 80 ವರ್ಷದ ವೃದ್ಧೆ ಮೃತ ಪಟ್ಟಿದ್ದಾರೆ. ಇವರನ್ನು ಹೊರತು ಪಡಿಸಿದರೆ ಉಳಿದಂತೆ ಶೇ.99ಕ್ಕೂ ಹೆಚ್ಚು ಜನರು ಈಗಾಗಲೇ ಚೇತರಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಪ್ರಸಕ್ತ ಆಕ್ಸಿಜನ್‌ನಲ್ಲಿ ಇರುವವರೂ ಸಹ ಆರೋಗ್ಯ ಸಮಸ್ಯೆ ಹೆಚ್ಚು ತೀವ್ರವಾಗಿಲ್ಲ. ಮೂರನೇ ಅಲೆಯಲ್ಲಿ ಜನರು ಗುಣವಾಗುವ ವೇಗವೂ ಹೆಚ್ಚಾಗಿದೆ. ಈ ಹಿಂದೆ ಕೊರೊನಾ ಸೋಂಕಿತ ಸಿಲುಕಿದವರನ್ನು 14 ದಿನಗಳ ನಂತರ ಗುಣವಾದವರು ಎಂದು ಪರಿಗಣಿಸಲಾಗುತ್ತಿತ್ತು. ಈಗ ತೀವ್ರತೆ ಕಡಿಮೆ ಇರುವ ಕಾರಣ ಏಳು ದಿನಗಳಲ್ಲೇ ಗುಣವಾದವರು ಎಂದು ಪರಿಗಣಿಸಲಾಗುತ್ತಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್ ತಿಳಿಸಿದ್ದಾರೆ.

ಕೊರೊನಾದ ಮೂರನೇ ಅಲೆ ಮಕ್ಕಳಿಗೆ ಅಪಾಯ ತರುತ್ತದೆ ಎಂದು ಈ ಹಿಂದೆ ದೊಡ್ಡದಾಗಿ ಅಪಪ್ರಚಾರ ಮಾಡಿದ್ದೂ ಸಹ ಹುಸಿಯಾಗಿದೆ. ಕೊರೊನಾ ಸೋಂಕಿಗೆ ಗುರಿಯಾದ ಶೇ.99ರಷ್ಟು ಮಕ್ಕಳಲ್ಲಿ ಯಾವುದೇ ರೋಗ ಲಕ್ಷಣಗಳು ಕಂಡು ಬಂದಿಲ್ಲ.

ಮಕ್ಕಳ ಸೋಂಕಿನ ಬಗ್ಗೆ ಮಾತನಾಡಿರುವ ರಾಘವನ್, ಶೇ.99ರಷ್ಟು ಮಕ್ಕಳು ಲಕ್ಷಣ ರಹಿತರು ಇಲ್ಲವೇ ಲಕ್ಷಣ ಬರುವುದಕ್ಕೆ ಮುಂಚಿನ ಹಂತದಲ್ಲಿದ್ದಾರೆ. ಅವರು ಸ್ವಲ್ಪ ಮಾತ್ರದ ಚಿಕಿತ್ಸೆಯಿಂದಲೇ ಸ್ಪಂದಿಸುತ್ತಿದ್ದಾರೆ. ಇದುವರೆಗೆ ಸೋಂಕು ಖಚಿತವಾದ 281 ಮಕ್ಕಳಲ್ಲಿ ಒಂದು ಮಗುವಿಗೂ ಆಕ್ಸಿಜನ್ ಅಗತ್ಯ ಕಂಡು ಬಂದಿಲ್ಲ ಎಂದು ರಾಘವನ್ ತಿಳಿಸಿದ್ದಾರೆ.

ವಯಸ್ಕರಲ್ಲೂ ಸಹ ಶೇ.99ರಷ್ಟು ಜನರಿಗೆ ಆಕ್ಸಿಜನ್ ಅಗತ್ಯ ಕಂಡು ಬರುತ್ತಿಲ್ಲ. ಲಸಿಕೆಯಿಂದಾಗಿ ದೊರೆಯುವ ಆಂಟಿಬಾಡಿಗಳು ಹಾಗೂ ಲಸಿಕೆಯಿಂದ ಸಿಗುವ ರೋಗ ನಿರೋಧಕ ಶಕ್ತಿಯು ಸೋಂಕು ತೀವ್ರತೆ ಹೆಚ್ಚಾಗದಿರಲು ಪ್ರಮುಖ (3ನೇ ಪುಟಕ್ಕೆ)

### ಮಕ್ಕಳೂ ಸೇರಿ ಸೋಂಕಿತರ ತ್ವರಿತ ಚೇತರಿಕೆ

### ಯಾವ ಮಗುವಿಗೂ ಕಂಡಿಲ್ಲ ಆಕ್ಸಿಜನ್ ಅಗತ್ಯ

### ಶೇ.65ರಷ್ಟು ಅರ್ಹರಿಗೆ ಬೂಸ್ಟರ್ ಲಸಿಕೆ

ದಾವಣಗೆರೆ, ಜ. 18 - ಜಿಲ್ಲೆಯಲ್ಲಿ ಬೂಸ್ಟರ್ ಡೋಸ್ ವಿತರಣೆಯಲ್ಲಿ ಶೇ.65ರ ಸಾಧನೆಯಾಗಿದೆ ಎಂದು ಜಿಲ್ಲಾಡಳಿತದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕೋವಿಡ್ ಪೋರ್ಟಲ್‌ನಲ್ಲಿರುವಂತೆ 10,771 ಜನರು ಬೂಸ್ಟರ್ ಲಸಿಕೆ ಪಡೆಯಲು ಅರ್ಹರಾಗಿದ್ದಾರೆ. ಇದುವರೆಗೂ ಒಟ್ಟಾರೆ 7,038 ಜನರಿಗೆ ಬೂಸ್ಟರ್ ಡೋಸ್ ಲಸಿಕೆ ನೀಡಲಾಗಿದೆ.

ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ 60 ವರ್ಷ ಮೀರಿದ ಸಹ ಅಸ್ವಸ್ಥತೆ ಉಳ್ಳವರಿಗೆ ಬೂಸ್ಟರ್ ಡೋಸ್ ಕೊಡಲಾಗುತ್ತಿದೆ. ಇದುವರೆಗೂ 4,247 ಆರೋಗ್ಯ ಕಾರ್ಯಕರ್ತರು, 945 ಮುಂಚೂಣಿ ಕಾರ್ಯಕರ್ತರು ಹಾಗೂ 60 ವರ್ಷ ಮೀರಿದ 1,845 ಜನರಿಗೆ ಬೂಸ್ಟರ್ ಡೋಸ್ ನೀಡಲಾಗಿದೆ.

### ಜಿಲ್ಲೆಯಲ್ಲಿ 257 ಪಾಸಿಟಿವ್ 3ನೇ ಅಲೆಯ ಮೊದಲ ಸಾವು



**ದಾವಣಗೆರೆ, ಜ.18- ಜಿಲ್ಲೆಯಲ್ಲಿ 257 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಹೊನ್ನಾಳಿ ತಾಲ್ಲೂಕಿನ ಸೊಪ್ಪಿನಕೇರಿಯ 80 ವರ್ಷ ವೃದ್ಧೆ ಸೋಂಕಿನಿಂದಾಗಿ ಮೃತಪಟ್ಟ ಬಗ್ಗೆ ವರದಿಯಾಗಿದೆ. ಸಕ್ರಿಯ ಸೋಂಕಿತರ ಸಂಖ್ಯೆ 1036ಕ್ಕೆ ಏರಿಕೆಯಾಗಿದೆ.**

**ದಾವಣಗೆರೆ ತಾಲ್ಲೂಕಿನಲ್ಲಿ 146, ಹರಿಹರ 40, ಜಗಳೂರು 20, ಚನ್ನಗಿರಿ 29, ಹೊನ್ನಾಳಿ ತಾಲ್ಲೂಕಿನ 22 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. 126 ಜನರು ಗುಣಮುಖರಾಗಿದ್ದಾರೆ.**

**ಜಿಲ್ಲೆಯಲ್ಲಿ ಇಲ್ಲಿಯವರೆಗೆ 52376 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 50732 ಜನರು ಗುಣಮುಖರಾಗಿದ್ದಾರೆ. 609 ಜನರು ಸಾವನ್ನಪ್ಪಿದ್ದಾರೆ.**

# ಏ.16ರಿಂದ ದ್ವಿತೀಯ ಪಿ.ಯು. ಪರೀಕ್ಷೆ

ಬೆಂಗಳೂರು, ಜ. 18 – ರಾಜ್ಯ ಪಿ.ಯು. ಶಿಕ್ಷಣ ಇಲಾಖೆಯು ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿಗಳ ಪೂರ್ವ ಸಿದ್ಧತಾ, ಪ್ರಾಯೋಗಿಕ ಹಾಗೂ ವಾರ್ಷಿಕ ಪರೀಕ್ಷೆಗಳ ತಾತ್ಕಾಲಿಕ ವೇಳಾಪಟ್ಟಿ ಬಿಡುಗಡೆ ಮಾಡಿದೆ.

ಏಪ್ರಿಲ್ 16ರಿಂದ ಮೇ 4ರವರೆಗೆ ದ್ವಿತೀಯ ಪಿ.ಯು. ಪರೀಕ್ಷೆ ನಡೆಸಲಾಗುವುದು. ಈ ಬಗ್ಗೆ ಆಕ್ಷೇಪಗಳಿದ್ದಲ್ಲಿ ಫೆಬ್ರವರಿ 1ರವರೆಗೆ ಸಲ್ಲಿಸಬಹುದಾಗಿದೆ.

ದ್ವಿತೀಯ ಪಿಯು ಪ್ರಾಯೋಗಿಕ ಪರೀಕ್ಷೆಗಳನ್ನು ಫೆ.17 ರಿಂದ ಮಾರ್ಚ್ 25ರ ನಡುವೆ ನಡೆಸಲಾಗುವುದು. ದ್ವಿತೀಯ ಪಿ.ಯು. ಪೂರ್ವಸಿದ್ಧತಾ ಪರೀಕ್ಷೆಗಳನ್ನು ಮಾರ್ಚ್ 14 ರಿಂದ 25ರ ನಡುವೆ ನಡೆಸಲಾಗುವುದು.

ಇದೇ ವೇಳೆ, ಕೊರೊನಾ ಹಿನ್ನೆಲೆಯಲ್ಲಿ ದ್ವಿತೀಯ ಪಿಯು. ಪಠ್ಯದಲ್ಲಿ ಬದಲಾವಣೆ (2ನೇ ಪುಟಕ್ಕೆ)

# 2172 ಮತದಾರರನ್ನು ಕೈಬಿಟ್ಟ ಅಧಿಕಾರಿಗಳು

ದಾವಣಗೆರೆ, ಜ.18- ಯಾವುದೇ ಮುನ್ಸೂಚನೆ ನೀಡದೇ, ರಾಜಕೀಯ ದುರುದ್ದೇಶದಿಂದ ಮತದಾರರ ಪಟ್ಟಿಯಿಂದ ವಿನೋಬನಗರ ವಾರ್ಡ್ ನಂ.16 ರಲ್ಲಿ 2172 ಮತದಾರರನ್ನು ಸಾಮೂಹಿಕವಾಗಿ ಕೈಬಿಡಲಾಗಿದೆ ಎಂದು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮೂವತ್ತು, ನಲವತ್ತು ವರ್ಷಗಳಿಂದ ವಿನೋಬನಗರದಲ್ಲಿ ವಾಸವಾಗಿದ್ದರೂ, ಕೆಲವರು ಬಾಡಿಗೆ ಮನೆಯಲ್ಲಿ ವಾಸವಾಗಿರುವ ಮತ್ತು ಸ್ವಂತ ಮನೆ ಹೊಂದಿದ, ಆಧಾರ ಕಾರ್ಡ್, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಎಲ್ಲಾ ಗುರುತಿನ ಚೀಟಿಗಳಿದ್ದರೂ ಸಹ ವಿರೋಧ ಪಕ್ಷದ ಕೆಲವರು ಪಾಲಿಕೆ ಅಧಿಕಾರಿಗಳ ಜೊತೆ ಶಾಮೀಲಾಗಿ ವಿನೋಬನಗರ ಜನತೆಯ ಮತ (3ನೇ ಪುಟಕ್ಕೆ)

## ಮಕ್ಕಳಿಗೆ ಕೋವ್ಯಾಕ್ಸಿನ್ ಬದಲು ಬೇರೆ ಲಸಿಕೆಯ ವರದಿ

**ಭಾರತ್ ಬಯೋಟೆಕ್**

ನವದೆಹಲಿ, ಜ. 18 – ಹದಿನೈದರಿಂದ ಹದಿನೆಂಟು ವರ್ಷದವರಿಗೆ ಕೋವ್ಯಾಕ್ಸಿನ್ ಬದಲು ಬೇರೆ ಲಸಿಕೆ ನೀಡುತ್ತಿರುವ ಬಗ್ಗೆ ಹಲವು ವರದಿಗಳು ಬಂದಿರುವುದಾಗಿ ಭಾರತ್ ಬಯೋಟೆಕ್ ತಿಳಿಸಿದೆ.

ಆರೋಗ್ಯ ಕಾರ್ಯಕರ್ತರು ಎಚ್ಚರವಾಗಿರಬೇಕು ಹಾಗೂ ಕೋವ್ಯಾಕ್ಸಿನ್ ಲಸಿಕೆಯನ್ನು ಮಾತ್ರ ಈ ವರ್ಗದವರಿಗೆ ನೀಡಬೇಕು ಎಂದು ಭಾರತ್ ಬಯೋಟೆಕ್‌ನ ಹೇಳಿಕೆಯಲ್ಲಿ ತಿಳಿಸಲಾಗಿದೆ. 2-18ರ ವಯೋಮಾನದವರಿಗೆ ಕೊವ್ಯಾಕ್ಸಿನ್ ಲಸಿಕೆ ನೀಡಲು ಸರ್ಕಾರ ಅನುಮತಿ ನೀಡಿದೆ. ಪ್ರಸಕ್ತ 15-18 ವಯೋಮಾನದವರಿಗೆ ಮಾತ್ರ ಲಸಿಕೆ ನೀಡಲಾಗುತ್ತಿದೆ.

# ಅಸಮರ್ಪಕ ಮಾಹಿತಿ ನೀಡುವ ವೈದ್ಯರ ವಿರುದ್ಧ ಮೊಕದ್ದಮೆ

**ಜಾಲತಾಣ, ಮಾಧ್ಯಮಗಳಲ್ಲಿ ಮಾರ್ಗಸೂಚಿಗಳ ವಿರುದ್ಧ ತಪ್ಪು ಮಾಹಿತಿ ನೀಡದಂತೆ ಸರ್ಕಾರದ ಎಚ್ಚರಿಕೆ**

ಬೆಂಗಳೂರು, ಜ.18 - ಕೊರೊನಾಗೆ ಸಂಬಂಧಿಸಿದಂತೆ ಕೆಲವು ವೈದ್ಯರು ಅಸಮರ್ಪಕ ಹಾಗೂ ಅಪೂರ್ಣ ಮಾಹಿತಿ ನೀಡುತ್ತಿದ್ದು, ಅಂತಹವರ ವಿರುದ್ಧ ಅಪರಾಧ ಮೊಕದ್ದಮೆಗಳನ್ನು ಹೂಡಬೇಕಾಗುತ್ತದೆ ಎಂದು ಸರ್ಕಾರ ಎಚ್ಚರಿಕೆ ನೀಡಿದೆ.

ಕೆಲವು ವೈದ್ಯರು ಮತ್ತು ಪರಿಣಿತರು ಅಸಮರ್ಪಕ ಮಾಹಿತಿ ನೀಡಿ, ಜನರು ಕೋವಿಡ್-19 ಮಾರ್ಗಸೂಚಿ ವಿರುದ್ಧ ನಡೆದುಕೊಳ್ಳಲು ಪ್ರೇರಣೆ ನೀಡುತ್ತಿದ್ದಾರೆ. ಇನ್ನು ಮುಂದೆ ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದಂತೆ ಯಾವುದೇ ವೈದ್ಯರು, ಪರಿಣಿತರು ಮಾಹಿತಿ ನೀಡುವಂತಿಲ್ಲ.

ಸಾಮಾಜಿಕ ಜಾಲತಾಣಗಳಲ್ಲಾಗಲೀ, ಇಲ್ಲವೇ ಮಾಧ್ಯಮಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ತಂದಿರುವ ಮಾರ್ಗಸೂಚಿ ವಿರುದ್ಧವಾಗಿ ತಪ್ಪು ಮಾಹಿತಿ ನೀಡಿದರೆ ಅಪರಾಧ ಎಂದು ಪರಿಗಣಿಸಿ, ವಿಪತ್ತು ನಿರ್ವಹಣೆ ಕಾಯ್ದೆ 2005 ಹಾಗೂ ಕರ್ನಾಟಕ (2ನೇ ಪುಟಕ್ಕೆ)

# ದಾವಣಗೆರೆ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಕುರಿತಂತೆ ವಿಧಾನಸೌಧದಲ್ಲಿ ಸುದೀರ್ಘ ಚರ್ಚೆ



ಬೆಂಗಳೂರು, ಜ.18-ದಾವಣಗೆರೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಕುರಿತಂತೆ ಹಾಗೂ ಸರ್ಕಾರದ ಮಟ್ಟದಲ್ಲಿ ಬಾಕಿ ಉಳಿದಿರುವ ದಾವಣಗೆರೆ ಜಿಲ್ಲೆಯ ಯೋಜನೆಗಳ ಬಗ್ಗೆ ವಿಧಾನಸೌಧದಲ್ಲಿ ಇಂದು ಸುದೀರ್ಘ ಚರ್ಚೆ ನಡೆಯಿತು.

ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅಧ್ಯಕ್ಷತೆಯಲ್ಲಿ ಅವರ ಕಚೇರಿಯಲ್ಲಿ ಏರ್ಪಾಡಾಗಿದ್ದ ಈ ಸಭೆಯಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ವಿವಿಧ ಯೋಜನೆಗಳ ಕುರಿತಂತೆ ಪ್ರಸ್ತಾಪಿಸಿ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದೇವರಮನೆ ಶಿವಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರುಗಳೂ ಸಹ ದಾವಣಗೆರೆ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಬಗ್ಗೆ ಸಂಸದರೊಂದಿಗೆ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಡಾ.ಎ.ಎನ್. ಅಜಯ್ ನಾಗಭೂಷಣ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀಮತಿ ಎಂ. ಎಸ್.ಅರ್ಚನಾ, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ನಿರ್ದೇಶಕ ಎನ್. ಶಶಿಕುಮಾರ್, ಪೌರಾಡಳಿತ ನಿರ್ದೇಶನಾಲಯದ ಮುಖ್ಯ ಅಭಿಯಂತರ ಸತ್ಯನಾರಾಯಣ, ದಾವಣಗೆರೆ ಮಹಾನಗರ ಪಾಲಿಕೆ ಮತ್ತು ದೂಡಾ ಆಯುಕ್ತರು ಸೇರಿದಂತೆ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಟೆಸ್ಟ್ ಹೆಚ್ಚಿಸಲು ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ

ನವದೆಹಲಿ, ಜ. 18- ಹಲವು ರಾಜ್ಯಗಳಲ್ಲಿ ಕೊರೊನಾ ಟೆಸ್ಟ್ ಕಡಿಮೆಯಾಗುತ್ತಿರುವುದನ್ನು ಪರಿಗಣಿಸಿರುವ ಕೇಂದ್ರ ಸರ್ಕಾರ, ಕೊರೊನಾ ಹರಡುವುದನ್ನು ತಡೆಯಲು ಟೆಸ್ಟ್ ಪ್ರಮಾಣ ಹೆಚ್ಚಿಸುವಂತೆ ತಿಳಿಸಿದೆ.

ರಾಜ್ಯಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಆರತಿ ಅಹುಜ, ಟೆಸ್ಟ್ ಹೆಚ್ಚಿಸುವ ಬಗ್ಗೆ ಗಮನಿಸಬೇಕು.

ಕೊರೊನಾ ಹೆಚ್ಚಿರುವ ಕ್ಲಸ್ಟರ್‌ಗಳು ಹಾಗೂ ಹಾಟ್‌ಸ್ಪಾಟ್‌ಗಳನ್ನು ಗುರುತಿಸಲು ಟೆಸ್ಟ್‌ಗಳು ನೆರವಾಗುತ್ತವೆ ಎಂದಿದ್ದಾರೆ.

# ಅಯ್ಯಪ್ಪ ಸ್ವಾಮಿ ಸರಳ ರಥೋತ್ಸವ



**ಹರಪನಹಳ್ಳಿ**

ಹರಪನಹಳ್ಳಿ, ಜ.18- ರಾಜ್ಯದಲ್ಲಿ ಕೋವಿಡ್ ರೂಪಾಂತರಿ ಓಮಿಕ್ರೋನ್ ವೈರಸ್ ಉಲ್ಬಣವಾಗುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದ ಮೇಗಳಪೇಟೆಯ ಸಮೀಪದಲ್ಲಿರುವ ಭಾರತಿ ನಗರದ ಅಯ್ಯಪ್ಪಸ್ವಾಮಿ ಸನ್ನಿಧಿಯಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಈ ಬಾರಿ ಮೊದಲ ವರ್ಷದ ರಥೋತ್ಸವ, ದೀಪಾರಾಧನೆ, ಮಹಾ ಮಂಗಳಾರತಿ ಹಾಗೂ ಧರ್ಮಸಭೆ ಸರಳವಾಗಿ ಜರುಗಿತು.

ಪಟ್ಟಣದ ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಡಗಲಿ ಗವಿಸಿದ್ದೇಶ್ವರ ಶಾಖಾಮಠದ ಡಾ.ಹಿರಿಶಾಂತ ವೀರಸ್ವಾಮೀಜಿ, ನೀಲಗುಂದ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ, ಹೊಳಗುಂದಿ ಸಿದ್ದೇಶ್ವರ ಸಂಸ್ಥಾನಮಠದ ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಇಟ್ಟಿಗಿ ಹಿರೇಮಠದ ಶ್ರೀ ಗುರುಶಾಂತವೀರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ನಿವೃತ್ತ ಶಿಕ್ಷಕಿ, ದಾನ ಚಿಂತಾಮಣಿ, ಮದರ್ ತೆರೆಸಾ ಪ್ರಶಸ್ತಿ ಪುರಸ್ಕೃತರಾದ ಹೆಚ್.ಎಂ. (2ನೇ ಪುಟಕ್ಕೆ)




ಹೃದಯಪೂರ್ವಕ ಕೃತಜ್ಞತೆಗಳು

ರಾಷ್ಟ್ರೀಯ ಗೋ ಸೇವಾ ಸಂಘದ ಕರ್ನಾಟಕ ರಾಜ್ಯದ ರಾಜ್ಯಾಧ್ಯಕ್ಷರನ್ನಾಗಿ ನನ್ನನ್ನು ನೇಮಕ ಮಾಡಿದ ರಾಷ್ಟ್ರೀಯ ಗೋ ಸೇವಾ ಸಂಘದ ಎಲ್ಲಾ ಪದಾಧಿಕಾರಿಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು.



ಟಿ. ಸಿದ್ದಪ್ಪ

ಅಧ್ಯಕ್ಷರು: ರಾಷ್ಟ್ರೀಯ ಗೋ ಸೇವಾ ಸಂಘ,ಕರ್ನಾಟಕ ರಾಜ್ಯ ಘಟಕ

ಅಧ್ಯಕ್ಷರು: ತಿರುಪತಿ ತಿರುಮಲ ದಾಸ ಸಾಹಿತ್ಯ ಪ್ರಾಜೆಕ್ಟ್, ದಾವಣಗೆರೆ ಜಿಲ್ಲೆ.

ಬಿಜೆಪಿ ಮುಖಂಡರು, ದಾವಣಗೆರೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
30x50 East Rs. 1750, 30x40 South Rs. 1500, 40x60 East Rs. 1700 KHB ಯಲ್ಲಿ, 30x40 West, 40ಅಡಿ ರೋಡಿಗಿದೆ. ಬನಶಂಕರಿಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಬೇಕಾಗಿದ್ದಾರೆ**
ಶಾಲೆಯಲ್ಲಿ ಆಯಾ ಕೆಲಸ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 8.30 ರಿಂದ ಸಂಜೆ 6 ಗಂಟೆವರೆಗೆ
ಸಫಾಜ್ ಸೆಕ್ಯೂರಿಟಿ
ವಿನೋಬನಗರ, 3ನೇ ಮೇನ್, 1ನೇ ಕ್ರಾಸ್, ದಾವಣಗೆರೆ
91130 53483

**ಮನೆ ಲೀಜ್‌ಗೆ ಲಭ್ಯವಿವೆ**
(ಸಸ್ಯಹಾರಿಗಳಿಗೆ ಮಾತ್ರ)
ನೆಲ ಮಹಡಿ - 2 ಬೆಡ್ ರೂಂ
1ನೇ ಮಹಡಿ - 3 ಬೆಡ್ ರೂಂ
2ನೇ ಮಹಡಿ - ರೂಮ್
ಡಿಸಿಎಂ ಲೇಔಟ್, ದಾವಣಗೆರೆ.
99024 12406, 94822 01267

**ಮಾರಾಟಕ್ಕಿದೆ**
ಸಿಮೆಂಟ್ ಬ್ರಿಕ್ಸ್ ಫ್ಯಾಕ್ಟರಿ ಮಾರಾಟಕ್ಕಿದೆ. ಸರ್ವೆ ನಂಬರ್ 134/3 ಒಂದು ಎಕರೆ ಎನ್.ಎ. ಆಗಿದೆ 27 ಗುಂಟೆ ಹೊಲ ಮಾರಾಟಕ್ಕಿದೆ -ಐಗೂರು, ದಾವಣಗೆರೆ ಜಿಲ್ಲೆ
90365 59096, 92428 37951

**ಕೆಲಸಕ್ಕೆ ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಮತ್ತು ಕಂಪ್ಯೂಟರ್‌ನಲ್ಲಿ ಅನುಭವವಿರುವವರು ಬೇಕಾಗಿದ್ದಾರೆ. ಎಲ್ಲಾ ಶಾಪ್‌ಗಳಿಗೆ ಬೇಕಾಗಿರುವ ರ್‍ಯಾಕ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿ
70192 49897

**ಸುವರ್ಣಾವಕಾಶ**
ನೇರವಾಗಿ SSLC ಪರೀಕ್ಷೆ ಬರೆಯಬಹುದು
7, 8 ,9, 10ನೇ ಪಾಸ್ & ಫೇಲಾದವರು
ಕೊನೆಯ ದಿನಾಂಕ 20-1-2022
ಸಿಂಚನ ಕರೆಸ್ಪಾಂಡೆನ್ಸ್ ಕಾಲೇಜ್
ದಾವಣಗೆರೆ.
85532 78258, 90195 80600

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆಕೆಲಸ ಹಾಗೂ ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಸ್ಟ್ಯಾಂಡರ್ಡ್ ಮಹಿಳೆ ಬೇಕಾಗಿದ್ದಾರೆ. ಊಟ-ವಸತಿ ವ್ಯವಸ್ಥೆ ಇದೆ. ಸಂಬಳ ರೂ. 30,000/- ನೀಡಲಾಗುತ್ತದೆ.
ಫೋ. : 78291 91921

**Commercial Building For Rent**
16×50 Measuring & Commercial Shop. 133/4 Opp LIC Office, K.R Road, Davanagere.
Contact: 94483 76399

**ಹೊಲ ಬಾಡಿಗೆಗೆ/ಲೀಸ್‌ಗೆ ಇದೆ**
5 ಎಕರೆ, 20 ಗುಂಟೆ ಹೊಲ ಬಾಡಿಗೆಗೆ ಇದೆ. ಜರಿಕಟ್ಟೆ, ದಾವಣಗೆರೆ ಜಿಲ್ಲೆ. ಹೋಟೆಲ್ ಹಾಗೂ ಶಾಲೆಗಳಿಗೆ ಬಾಡಿಗೆಗೆ ದೊರೆಯುತ್ತದೆ. ದೇವರಬೆಳಕೆರೆ ಮುಖ್ಯರಸ್ತೆ, ದಾವಣಗೆರೆಯಿಂದ. 8 ಕಿ.ಮೀ. ದೂರ
ಫೋ. : 99648 66666

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಸ್ಟಾಕ್ ಚೆಕ್ಕಿಂಗ್ ಮಾಡಲು ಪಾರ್ಟ್ ಟೈಂ ಹಾಗೂ ಫುಲ್ ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಹಾಗೂ ದಾವಣಗೆರೆಯಲ್ಲಿ ವಾಸವಿರುವವರಿಗೆ ಆದ್ಯತೆ.
ವೆಂಕಟೇಶ್ವರ ಫಾರ್ಮಾಸ್ಯೂಟಿಕಲ್ಸ್
2ನೇ ಮೇನ್, ಕೆಟಿಜೆ ನಗರ, ದಾವಣಗೆರೆ-02.
ಫೋ. :86607 75329

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**TEACHERS WANTED**
We look for trained and untrained teachers with fluency in English for the following subject. English, Maths, Science, Social, Hindi, Kannada, Computer Science
Sri Gurukula CBSE Residential School
Lokikere Road, Thuruchagatta Village, Davangere.
7338604512, 73386 04513

**JOB ORIENTED COURSES**
SPOKEN ENGLISH, PHOTOSHOP & CORELDRAW, C,C++, JAVA, PYTHON, CATIA, AUTOCAD, REVIT SCHOOL PROJECTS
Ph:89712 79127

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ರೂಂ ಬಾಯ್ ಮತ್ತು ಹಗಲು ಪಾಳೆಯಕ್ಕೆ ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಮೊ.63639-54459

**ಬೇಕಾಗಿದ್ದಾರೆ**
Tele calling ಮತ್ತು marketing executive ಹುದ್ದೆಗೆ minimum 1 year experience ಹೊಂದಿರುವ ಯುವಕ/ಯುವತಿಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
96068 47121

**ಬೇಕಾಗಿದ್ದಾರೆ**
ಮಹಿಳಾ ಜವಾನರು ಬೇಕಾಗಿದ್ದಾರೆ. ಆಯ್ಕೆಯಾದ ಅಭ್ಯರ್ಥಿಗೆ ಆಕರ್ಷಕ ವೇತನದೊಂದಿಗೆ ಮಗುವಿಗೆ ಉಚಿತ ಶಿಕ್ಷಣ ನೀಡಲಾಗುವುದು. ಸಂಪರ್ಕಿಸಿ :
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ಕೊಂಡಜ್ಜಿ ರಸ್ತೆ, ಹೊಸ RTO ಕಚೇರಿ ಹಿಂಭಾಗದ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ.
ಮೊ.99640 17729

**ವಧು ಬೇಕಾಗಿದ್ದಾರೆ**
ಹಿಂದೂ ಜನಾಂಗದ ಹುಡುಗ, 2ನೇ ಮದುವೆ, ಪತ್ನಿ ತೀರಿಕೊಂಡಿರುತ್ತಾರೆ (ಶ್ರೀಮಂತ ಕುಟುಂಬಕ್ಕೆ) ಸ್ಟ್ಯಾಂಡರ್ಡ್ ಕುಟುಂಬದ ವಿಧವೆ, ಗಂಡ ಬಿಟ್ಟಿರುವವರು ಮತ್ತು ಮಕ್ಕಳಿರುವವರಾದರೂ ಸರಿ ವಧು ಬೇಕಾಗಿದ್ದಾರೆ.
ಫೋ. 78291 91921

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**20x40 ಕೆಳಗೆ+ಮೇಲೆ ಮನೆ ಲೀಸ್‌ಗೆ ಇದೆ**
ನಲ್ಲಿ ಮತ್ತು ಬೋರ್ ನೀರಿನ ಸೌಕರ್ಯವಿದೆ.
KSRTC ಬಸ್‌ಸ್ಟ್ಯಾಂಡ್ ಹಿಂಭಾಗ, ಭಗತ್‌ಸಿಂಗ್ ನಗರ, ದಾವಣಗೆರೆ
(M) : 97439 68557
(M) : 98866 63948

**SHOP FOR RENT**
13x10 ft, 361/2, 4th main, 9th Cross, P.J. Extension, Davangere. (Behind) Vishweshwaraiah Park
Ph. : 94489 29509

**Wanted Teachers**
Scince, Maths, English
Documents Required
10th, 12th, Any Degree,
Reception also
97437 56647

**HOUSE FOR LEASE OR RENT**
2 BHK, 1st Floor with Lift facility. Doggalli Compound K.R Road Cross near LIC Office, Davanagere.
Contact: 94483 76399

**Site For Sale**
15000 sqft east facing corner site suitable for Resort, Bunglow Apartment with door number and ready to register in NR lake city.
Bank loan available at 6.7 %
Contact - 77607 47907

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female Freshers/Experienced
98444 92888

**ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ**
ದಾವಣಗೆರೆಯ ಹೆಸರಾಂತ ಸೂಟಿಂಗ್ & ಶರ್ಟಿಂಗ್ ಹಾಗೂ ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕಾರ್ಯ ನಿರ್ವಹಿಸಲು ಹುಡುಗರು ಬೇಕಾಗಿದ್ದಾರೆ.
90353 61640

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**


# ಹರಿಹರ ಪೀಠ ಪಂಚಮಸಾಲಿಗಳ ಧರ್ಮಕ್ಷೇತ್ರ



ಹರಿಹರ, ಜ.18- ಪಂಚಮಸಾಲಿ ಜಗದ್ಗುರು ಪೀಠಕ್ಕೆ ಆಗಮಿಸಿದ್ದ ಪಂಚಮಸಾಲಿ ಮಠಾಧೀಶರ ಒಕ್ಕೂಟದ ಅಧ್ಯಕ್ಷರಾದ ಬಬಲೇಶ್ವರ ಬೃಹನ್ಮಠದ ಡಾ. ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮೀಜಿ ನೇತೃತ್ವದ ಸ್ವಾಮೀಜಿಗಳ ತಂಡ, ಪೀಠದ ಬಗ್ಗೆ ಶ್ಲಾಘನೆ ವ್ಯಕ್ತಪಡಿಸುವ ಮೂಲಕ ಹರಿಹರ ಪೀಠ ಪಂಚಮಸಾಲಿಗಳ ಧರ್ಮಕ್ಷೇತ್ರವೆಂದು ಘೋಷಿಸಿದರು.

ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಶನಿವಾರ ನಡೆದ 'ಮಕರ ಸಂಕ್ರಾಂತಿ ಸಂಭ್ರಮ' ಕಾರ್ಯಕ್ರಮದಲ್ಲಿ ಬಬಲೇಶ್ವರ ಶ್ರೀಗಳು, ಶಿರಸಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಮನಗೂಳಿ ಹಿರೇಮಠದ ಶ್ರೀ ಅಭಿನವ ಸಂಗನಬಸವ ಸ್ವಾಮೀಜಿ ಸೇರಿದಂತೆ, ನಾನಾ ಮಠಾಧೀಶರು ಭಾಗವಹಿಸಿದ್ದರು.

ಇದೇ ವೇಳೆ ಮುಂದಿನ ದಿನಗಳಲ್ಲಿ ಸ್ಥಾಪನೆಯಾಗುವ ಪಂಚಮಸಾಲಿ ಮಠಗಳು ಹರಿಹರ ಜಗದ್ಗುರು ಪೀಠದ ಸಮಾನ ಚಿಂತನೆ ಹಾಗೂ ಸಂಘಟನೆ ಆದರ್ಶಗಳನ್ನು ಪಾಲಿಸಬೇಕು ಎಂಬ ಮಹತ್ವದ ನಿರ್ಧಾರವನ್ನು ಶ್ರೀಗಳು ಕೈಗೊಂಡರು.

**ಶ್ರೀಗಳು ಪ್ರೇರಣಾ ಶಕ್ತಿ:** ಈ ವೇಳೆ ಆಶೀರ್ವಚನ ನೀಡಿದ ಬಬಲೇಶ್ವರ ಬೃಹನ್ಮಠದ ಡಾ. ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮೀಜಿ, ಪಂಚಮಸಾಲಿ ಸಮುದಾಯದ ಧರ್ಮಕ್ಷೇತ್ರ ಎಂದು ಯಾವುದನ್ನಾದರು ಕರೆಯುವುದಾದರೆ ಅದು ಹರಿಹರದ ಪೀಠವನ್ನು ಮಾತ್ರ ಎಂದರು. ಹಾಗೇ, ತಾವೊಬ್ಬರೇ ಬೆಳೆಯಬೇಕು ಎಂಬ ಆಲೋಚನೆ ಬಹಳಷ್ಟು ಸ್ವಾಮೀಜಿಗಳಿಗೆ ಇದೆ. ಆದರೆ, ತಮ್ಮೊಂದಿಗೆ ಎಲ್ಲರನ್ನೂ ಕರೆದುಕೊಂಡು ಒಟ್ಟಾಗಿ ಬೆಳೆಯಬೇಕು ಎಂಬುದು ಶ್ರೀ ವಚನಾನಂದ ಸ್ವಾಮಿಗಳ ಮನೋಭಾವ. ಸಮುದಾಯಕ್ಕೆ ಅವರೊಬ್ಬ ಪ್ರೇರಣಾ ಶಕ್ತಿಯಾಗಿದ್ದು, ಅವರ ಪ್ರೇರಣೆಯಿಂದ ನಮ್ಮ ಸಮುದಾಯ ಮಾತ್ರವಲ್ಲದೆ, ಅನ್ಯ ಸಮುದಾಯದ ದಾನಿಗಳೂ ಮಠದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಮನಗೂಳಿ ಹಿರೇಮಠದ ಶ್ರೀ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಗುಬ್ಬಿಯ ಭೃಂಗೇಶ್ವರ ಪೀಠದ ಜಗದ್ಗುರು ಶ್ರೀ ಭೃಂಗೇಶ್ವರ ಸ್ವಾಮೀಜಿ, ಸಿದ್ದರಹಳ್ಳಿ ಪಾರಮಾರ್ಥಿಕ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಅಮರಗೋಳ ರಾಮಲಿಂಗೇಶ್ವರ ಮಠದ ಶ್ರೀ ಬಸವಲಿಂಗ ಸ್ವಾಮೀಜಿ, ಅಲಗೂರು ದರಿದೇವರ ಮಠದ ಶ್ರೀ ಶಾಂತಮೂರ್ತಿ ಲಕ್ಷ್ಮಣ ಮುತ್ಯಾ, ದೇವಪಟ್ಟದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಹಾಲಿನ ದರ ಹೆಚ್ಚಳಕ್ಕೆ ತೀರ್ಮಾನ

**(1ನೇ ಪುಟದಿಂದ)** ಒಕ್ಕೂಟ ಇಕ್ಕಟ್ಟಿಗೆ ಸಿಲುಕಿವೆ. ಕೋವಿಡ್ ನಂತಹ ಸಂದರ್ಭದಲ್ಲೂ ಒಕ್ಕೂಟ ಸರಿಸುಮಾರು 80 ಲಕ್ಷ ಲೀಟರ್ ಹಾಲನ್ನು ಪ್ರತಿನಿತ್ಯ ಖರೀದಿಸಿ, ತನ್ನ ಗ್ರಾಹಕರಿಗೆ ನೀಡುವುದಲ್ಲದೆ, ಹೊರ ರಾಜ್ಯ ಗಳಿಗೂ ಕಳುಹಿಸಿಕೊಡುತ್ತಿದ್ದೇವೆ.

ಹಾಲು ಉತ್ಪಾದನೆ ಹೆಚ್ಚಾಗಿ ಅಂತಹ ಹಾಲನ್ನು ಪುಡಿಯನ್ನಾಗಿ ಪರಿವರ್ತಿಸುವುದಲ್ಲದೆ, ಇತರೆ ಉತ್ಪನ್ನಗಳಿಗೂ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಒಕ್ಕೂಟ ಸರ್ಕಾರಕ್ಕೆ ವಿವರಿಸಿದೆ.

# ಬಡವರ ಬದುಕನ್ನು ಬರಡಾಗಿಸಿದ ಕೀರ್ತಿ ಬಿಜೆಪಿಯದ್ದು



**ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ ತರಾಟೆ**

ರಾಣೇಬೆನ್ನೂರು, ಜ. 18- ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಹಸನಾಗಿದ್ದ ಬಡವರ ಬದುಕನ್ನು ಬರಡನ್ನಾಗಿ ಮಾಡಿದ, ಪಡಿತರ ಅಕ್ಕಿ ಕಸಿದ, ಸಿಲಿಂಡರ್, ಡೀಸೆಲ್, ಪೆಟ್ರೋಲ್, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿಸಿ ಭಾಗ್ಯಜ್ಯೋತಿಯಂಥ ಯೋಜನೆಗಳನ್ನು ಕಸಿದ, ಪ್ರತಿಯೊಂದಕ್ಕೂ ಜಿ.ಎಸ್.ಟಿ. ಟ್ಯಾಕ್ಸ್ ವಸೂಲಿ ಮಾಡುತ್ತಿರುವ ಕೀರ್ತಿ ಬಿಜೆಪಿಗೆ ಸಲ್ಲುತ್ತದೆ ಎಂದು ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ ತರಾಟೆಗೆ ತೆಗೆದುಕೊಂಡರು.

ತಾಲ್ಲೂಕಿನ ಮುಷ್ಟೂರು ಗ್ರಾಮದಲ್ಲಿ ನಡೆದ ಯುವ ಕಾಂಗ್ರೆಸ್ ಸಂಘಟನೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ಸುಳ್ಳು ಭರವಸೆಗಳನ್ನು ನಂಬಿ ಯುವಕರು ಬಿಜೆಪಿ ಕಡೆ ಮುಖ ಮಾಡಿ ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ. 2 ಕೋಟಿ ಯುವಕರಿಗೆ ಉದ್ಯೋಗ ಸೃಷ್ಟಿಸುತ್ತೇನೆ ಎಂದು ಹೇಳಿದ ಮೋದಿ 10 ಕೋಟಿ ಯುವಕರನ್ನು ಬೀದಿಗೆ ತಳ್ಳಿದರು. ಕೋವಿಡ್ ಹೆಸ ರಿನಲ್ಲಿ ಕೋಟಿ ಕೋಟಿ ಲೂಟಿ ಹೊಡೆದು ಬಡವರ ಯೋಜನೆಗಳ್ನು ಕಸಿದ ಬಿಜೆಪಿ ಮತ್ತು ಮೋದಿಯ ಬಗ್ಗೆ ಯುವ ಜನತೆ ಭ್ರಮನಿರಸನಗೊಂಡಿದೆ ಎಂದರು.

ಇದೇ ಸಂದರ್ಭದಲ್ಲಿ ಮನೆಗಳನ್ನು ನಿರ್ಮಿಸಿಕೊಟ್ಟಿರುವ ಕೆ.ಬಿ. ಕೋಳಿವಾಡರನ್ನು ಗ್ರಾಮದ ಮಹಿಳೆಯರು ಸತ್ಕರಿಸಿದರು.

ವೇದಿಕೆಯ ಮೇಲೆ ಮಂಜನಗೌಡ ಪಾಟೀಲ, ಕೃಷ್ಣಪ್ಪ ಕಂಬಳಿ, ಸಣ್ಣತಮ್ಮಪ್ಪ ಬಾರ್ಕಿ, ಇಕ್ಬಾಲ್ ಸಾಬ್ ರಾಣೇಬೆನ್ನೂರು, ರವೀಂದ್ರಗೌಡ ಎಫ್ ಪಾಟೀಲ, ಹರಿಹರಗೌಡ ಪಾಟೀಲ, ಪ್ರಶಾಂತ ರಡ್ಡಿ, ಶಾಂತವ್ವ ಹಿರೇಮಠದ ಮುಂತಾದವರಿದ್ದರು.

## ಅಯ್ಯಪ್ಪ ರಥೋತ್ಸವ

**(1ನೇ ಪುಟದಿಂದ)** ಲಲಿತಮ್ಮ ಸೋಮಲಿಂಗಯ್ಯ ಅವರು ಅಂದಾಜು ಒಂದು ಲಕ್ಷ ರೂ. ಮೌಲ್ಯದಲ್ಲಿ ಅಯ್ಯಪ್ಪ ಸ್ವಾಮಿಗೆ ಲೋಹದಲ್ಲಿ ತಯಾರಿಸಿದ ರಥವನ್ನು ದಾನವಾಗಿ ನೀಡಿದ್ದಾರೆ.

ಈ ಬಾರಿಯ ಅಯ್ಯಪ್ಪಸ್ವಾಮಿ ಪ್ರಶಸ್ತಿಯನ್ನು ಕಿರಾಣಿ ವರ್ತಕರು ಹಾಗೂ ಸಂಸ್ಕಾರ ಭಾರತಿ ಅಧ್ಯಕ್ಷ ಮಹಾವೀರ ಭಂಡಾರಿ ಮತ್ತು ಸುಂಕದಕಲ್ಲು ಕೊಟ್ರೇಶ್ ಅವರಿಗೆ ನೀಡಿ ಗೌರವಿಸಲಾಯಿತು.

ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾ ಕಾರ್ಯದರ್ಶಿ ಆರ್. ಲೋಕೇಶ್ ಅವರು ಇಪ್ಪತ್ತೆರಡು ಸಾವಿರದ ಒಂದುನೂರಾ ಒಂದು ರೂಪಾಯಿಗೆ ಅಯ್ಯಪ್ಪ ಸ್ವಾಮಿಯ ರುದ್ರಾಕ್ಷಿ ಮಾಲೆಯನ್ನು ಮತ್ತು ಎಪಿಎಂಸಿ ವರ್ತಕ ಮಟ್ಟೇರ ಹನುಮಂತಪ್ಪ ಅವರು ಆರು ಸಾವಿರದ ಐದುನೂರಾ ಒಂದು ರೂಪಾಯಿಗೆ ಪಟಾಕ್ಷಿಯನ್ನು ತಮ್ಮದಾಗಿಸಿಕೊಂಡರು.

ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತ್ಕರ್, ಪುರಸಭೆ ಮಾಜಿ ಸದಸ್ಯ ಬಂಗ್ಲಿ ಸೋಮಶೇಖರ್, ಬೆಸ್ಕಾಂ ನಿವೃತ್ತ ಇಂಜಿನಿಯರ್ ಎಸ್.ಭೀಮಪ್ಪ, ತರಕಾರಿ ಈರಣ್ಣ, ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ಉಪಾಧ್ಯಕ್ಷ ಕೆ.ಆರ್.ಗಿರೀಶ್, ಖಜಾಂಚಿ ಕೌಟಿ ಮಂಜುನಾಥ, ಆಟೋ ಕೌಟಿ ಮಂಜುನಾಥ, ಶಿಕ್ಷಕ ರಾಜಶೇಖರ್, ಪ್ರವೀಣ, ಮೃತ್ಯುಂಜಯ, ಮಟ್ಟೇರ ಪ್ರಕಾಶ್, ಸತೀಶ್, ಹುಚ್ಚಪ್ಪ, ಕೊಟ್ರಗೌಡ, ಕೊಟ್ಟಿ ಈಶಣ್ಣ, ಸುರೇಂದ್ರ, ಮಂಚಾಲಿ, ಸಿದ್ದಯ್ಯ ಕೆಂಬಾವಿಮಠ, ವೀರಗಾಸೆ ಕಲಾವಿದ ಜಿ. ಮಲ್ಲಿಕಾರ್ಜುನ, ಸುಂಕದಕಲ್ಲು ಉಮೇಶ್ ಸೇರಿದಂತೆ, ಭಕ್ತರು ಉಪಸ್ಥಿತರಿದ್ದರು.

## ವೈದ್ಯರ ವಿರುದ್ಧ ಮೊಕದ್ದಮೆ

**(1ನೇ ಪುಟದಿಂದ)** ಸಾಂಕ್ರಾಮಿಕ ರೋಗ ಕಾಯ್ದೆ 2020 ರ ಶಿಫಾರಸ್ಸಿನ ಮೇರೆಗೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಸರ್ಕಾರ ಎಚ್ಚರಿಸಿದೆ.

ಕೆಲವು ವೈದ್ಯರು ಮತ್ತು ಪರಿಣಿತರು ಮಾಧ್ಯಮಗಳಲ್ಲಿ ಹೇಳಿಕೆ ನೀಡುತ್ತಿರುವುದಲ್ಲದೆ, ಸಾಮಾಜಿಕ ಜಾಲತಾಣಗಳಲ್ಲಿ ಕೋವಿಡ್‌ನ ಪರಿಸ್ಥಿತಿಯನ್ನು ವಿವರಿಸಿ, ಜನರಲ್ಲಿ ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದರು. ಕೆಲವು ಪರಿಣಿತರು ಸಾಮಾಜಿಕ ಜಾಲತಾಣಗಳಲ್ಲಿ ಅತಿರೇಕವಾಗಿ ಕೋವಿಡ್ ನಿಯಮಗಳ ವಿರುದ್ಧ ಹೇಳಿಕೆ ನೀಡುತ್ತಿದ್ದು, ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದ್ದರು. ಇಂತಹವರ ಮೇಲೆ ಹಿಡಿತ ಸಾಧಿಸಲು ಕಠಿಣ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದ್ದಾರೆ.

# ಶಾಲಾ ಕಟ್ಟಡದ ಕಳಪೆ ಕಾಮಗಾರಿ ನಿಲ್ಲಿಸಲು ಆಗ್ರಹ



**ಹರಪನಹಳ್ಳಿ ತಾಲ್ಲೂಕಿನ ಶೃಂಗಾರತೋಟ ಗ್ರಾಮಸ್ಥರ ಪ್ರತಿಭಟನೆ**

ಹರಪನಹಳ್ಳಿ, ಜ.18- ಶಾಲಾ ಕಟ್ಟಡದ ಕಳಪೆ ಕಾಮಗಾರಿ ತಡೆಯುವಂತೆ ಆಗ್ರಹಿಸಿ ರಾಜ್ಯ ಕಾರ್ಮಿಕರ ಪರಿಷತ್ ನೇತೃತ್ವದಲ್ಲಿ ತಾಲ್ಲೂಕಿನ ಶೃಂಗಾರತೋಟ ಗ್ರಾಮಸ್ಥರು ತಾಲ್ಲೂಕು ಮಿನಿ ವಿಧಾನಸೌಧದ ಎದುರು ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ರಾಜ್ಯ ಕಾರ್ಮಿಕ ಪರಿಷತ್ ಸದಸ್ಯರಾದ ಗುಡದಪ್ಪ ಮಾತನಾಡಿ, ಗ್ರಾಮದ ಹತ್ತಿರದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನೂತನವಾಗಿ ನಾಲ್ಕು ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಪಡೆದಿದ್ದು, ಬಾಗಳಿ ರಸ್ತೆಗೆ ಹೋಗುವ ಖಾಲಿ ಜೌಗು ಪ್ರದೇಶದಲ್ಲಿ ಕೊಠಡಿಗಳನ್ನು ಕೆಆರ್‌ಐಡಿಎಲ್‌ನಿಂದ ಆರಂಭಿಸಿದ್ದಾರೆ.

ಇಟ್ಟಿಗೆ, ಕಾಡುಗಲ್ಲುಗಳನ್ನು ಬಳಸಿದ್ದಾರೆ. ಈಗಾಗಲೇ ತಳಪಾಯ ನೀರಿನಾಂಶ ಹೆಚ್ಚಾಗಿರುವ ಕಾರಣ ಇಟ್ಟಿಗೆ ಮತ್ತು ಕಾಡುಗಲ್ಲುಗಳು ಗಟ್ಟಿಯಾಗಿರುವುದಿಲ್ಲ, ನೆಲದಾಳಕ್ಕೆ ಕುಸಿಯುತ್ತವೆ. ಇದರಿಂದ ಗೋಡೆ ಕುಸಿಯುವ ಸಾಧ್ಯತೆ ಇರುತ್ತದೆ. ಶಾಲಾ ಮಕ್ಕಳ ಹಿತದೃಷ್ಟಿಯಿಂದ ಗುತ್ತಿಗೆ ಪಡೆದಿರುವ ಅಧಿಕಾರಿಗಳು ಮರು ಕ್ರಿಯಾ ಯೋಜನೆ ತಯಾರಿಸಿ, ಸದರಿ ಜಾಗದಲ್ಲಿ ಗುಣಮಟ್ಟದ ಸಾಮಗ್ರಿಗಳೊಂದಿಗೆ ಕಾಮಗಾರಿ ಪುನಃ ಆರಂಭಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಕಾಂತರಾಜ, ರೇಖಾ, ಎ.ಸವಿತಾ, ಗ್ರಾಮಸ್ಥರಾದ ಎಂ.ಮಂಜುನಾಥ, ಸುರೇಶ್, ಹಾಲಪ್ಪ, ಸುರೇಶ್, ಹನುಮಂತಪ್ಪ, ರಮೇಶ್, ಮರಿಯಪ್ಪ, ಹಾಲಪ್ಪ, ದುರುಗಪ್ಪ, ಕೆ.ರಹಮತ್, ಸೇರಿದಂತೆ ಇತರರು ಇದ್ದರು.

## ಏ.16ರಿಂದ ದ್ವಿತೀಯ ಪಿ.ಯು. ಪರೀಕ್ಷೆ

**(1ನೇ ಪುಟದಿಂದ)** ತರಲಾಗಿದೆ. ಭಾಷಾ ವಿಷಯಗಳಲ್ಲಿ ಶೇ.30ರಷ್ಟು ವಿಷಯಗಳನ್ನು ಕಡಿತಗೊಳಿಸಲಾಗಿದೆ.

ಐಚ್ಛಿಕ ವಿಷಯಗಳ ಪಠ್ಯಕ್ರಮದಲ್ಲಿ ಯಾವುದೇ ಕಡಿತ ಇಲ್ಲ. ಆದರೆ, ಹೆಚ್ಚು ಸಂಖ್ಯೆಯಲ್ಲಿ ಪ್ರಶ್ನೆಗಳನ್ನು ನೀಡಿ, ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

ಮಾರ್ಚ್ 28 ರಿಂದ ಏಪ್ರಿಲ್ 13ರ ನಡುವೆ ಪ್ರಥಮ ಪಿಯುಸಿ ಪರೀಕ್ಷೆಗಳನ್ನು ನಡೆಸಲಾಗುವುದು. ಭಾಷಾ ಪಠ್ಯಕ್ರಮದಲ್ಲಿ ಶೇ.30ರ ಕಡಿತ ಮಾಡಲಾಗಿದೆ.

### ಜಯಮ್ಮ ಪವಾರ್ ನಿಧನ



ದಾವಣಗೆರೆ ಜಾಲಿನಗರ 2ನೇ ಮೇನ್, 1ನೇ ಕ್ರಾಸ್ ವಾಸಿ ದಿ. ರಾಂಜಿ ಯಲ್ಲೋಜಿರಾವ್ ಪವಾರ್ ಇವರ ಪತ್ನಿ ಜಯಮ್ಮ (71) ಇವರು ದಿನಾಂಕ 18.1.2022ರ ಮಂಗಳವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 19.1.2022ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಬೂದಿಹಾಳ್ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

### ಹೋಲೂರು ಪುಷ್ಪಲತಾ ನಿಧನ



ದಾವಣಗೆರೆ ವಿನೋಬನಗರ 2ನೇ ಮೇನ್, ಗಣೇಶ ದೇವಸ್ಥಾನದ ಹಿಂಭಾಗದ ವಾಸಿ ಹೆಚ್. ಶಿವಕುಮಾರ್ ಇವರ ಪತ್ನಿ ಹೋಲೂರು ಪುಷ್ಪಲತಾ (49) ಇವರು ದಿನಾಂಕ 18.1.2022ರ ಮಂಗಳವಾರ ಸಂಜೆ 6 ಗಂಟೆಗೆ ನಿಧನರಾದರು. ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.1.2022ರ ಬುಧವಾರ ಮಧ್ಯಾಹ್ನ 12 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ಮಾದನಹಳ್ಳಿ ಮಾಜಿ ಛೇರ್ಮನ್ ಎಂ. ವೀರಭದ್ರಪ್ಪ ನಿಧನ



ಜಗಳೂರು ತಾಲ್ಲೂಕು ಮಾದನಹಳ್ಳಿಯ ವೀರಶೈವ ಪಂಚಮಸಾಲಿ ಲಿಂಗಾಯತ ಸಮಾಜದ ಹಿರಿಯ ಮುಖಂಡರು, ಗ್ರಾಮದ ಹಿರಿಯರು, ಮಾಜಿ ಛೇರ್ಮನ್ ಎಂ. ವೀರಭದ್ರಪ್ಪ ಇವರು ದಿನಾಂಕ 18.01.2022ರ ಮಂಗಳವಾರ ರಾತ್ರಿ 8:30 ಕ್ಕೆ ನಿಧನರಾದರು. ಇವರ ಅಂತ್ಯಕ್ರಿಯೆಯನ್ನು ದಿನಾಂಕ 19.01.2022ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಮಾದನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

### ಶಾಮನೂರಿನ ವಡ್ಡಿನಹಳ್ಳಿ ಸಿದ್ದಪ್ಪ ನಿಧನ



ದಾವಣಗೆರೆ ಶಾಮನೂರಿನ ಆಂಜನೇಯ ದೇವಸ್ಥಾನದ ತೇರಿನ ಮನೆ ಪಕ್ಕದ ವಾಸಿ ವಡ್ಡಿಹಳ್ಳಿ ಸಿದ್ದಪ್ಪ (63) ಇವರು ದಿನಾಂಕ 18.01.2022ರ ಮಂಗಳವಾರ ರಾತ್ರಿ 11.45ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.1.2022ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಭಾವಪೂರ್ಣ ಶ್ರದ್ಧಾಂಜಲಿ




ನಮ್ಮ ಸಹಕಾರಿಯ ನಿರ್ದೇಶಕರೂ,
ನಗರ ಸಾರಿಗೆ ವಿನಾಯಕ ಬಸ್ ಮಾಲೀಕರೂ ಆದ
ಶ್ರೀ ಎಂ.ಎನ್. ಹರೀಶ್ ಅವರ ತಂದೆಯವರಾದ
ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ಗ್ರಾಮದ
ವೀರಶೈವ ಸಮಾಜದ ಹಿರಿಯ ಮುಖಂಡರಾದ
**ಧರ್ಮರತ್ನಾಕರ**
**ಶ್ರೀ ಎಂ. ನಾಗರಾಜ್ ಕೂಡ್ಲಿಗೆರೆ**
ಅವರು ದಿನಾಂಕ 17.1.2022ರಂದು ನಿಧನರಾಗಿದ್ದು,
ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು, ಸಿಬ್ಬಂದಿ ವರ್ಗದವರು
**ಸನ್ಮತಿ ಸೌಹಾರ್ದ ಸಹಕಾರಿ ನಿಯಮಿತ**
ಮೊದಲನೇ ಮಹಡಿ, ಮಂಡಿಪೇಟೆ, ದಾವಣಗೆರೆ.

|| ಶ್ರೀ ಗೋಣಿಬಸವೇಶ್ವರ ಪ್ರಸನ್ನ || || ಶ್ರೀ ಚಿಂಚಲಿ ಮಾಯಮ್ಮದೇವಿ ಪ್ರಸನ್ನ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಹರಿಹರ ತಾ|| ಮಲೇಬೆನ್ನೂರು ಪೋ
ಕೊಮಾರನಹಳ್ಳಿ ಗ್ರಾಮದ ವಾಸಿ
**ಶ್ರೀಮತಿ, ಶ್ರೀ ಮಂಜುನಾಥ್,**
**ಶ್ರೀಮತಿ, ಶ್ರೀ ಅಣ್ಣಪ್ಪ**
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ 12.01.2022ನೇ
ಬುಧವಾರ ಬೆಳಗಿನ ಜಾವ 3.20ಕ್ಕೆ
ನಮ್ಮ ಪೂಜ್ಯ ತಾಯಿಯವರಾದ

**ಹರಿಹರದರ ಶ್ರೀಮತಿ ರತ್ನಮ್ಮನವರು**
**(ಕಕ್ಕರಗೊಳ್ಳದ ವಾಸಿ ಹರಿಹರದ ದಿ|| ಶ್ರೀ ಕೆ. ರೇವಣಸಿದ್ದಪ್ಪನವರ ಧರ್ಮಪತ್ನಿ)**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು ದಿನಾಂಕ 20.1.2022ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಹರಿಹರ ತಾಲ್ಲೂಕು ಕೊಮಾರನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: **ಶ್ರೀಮತಿ, ಶ್ರೀ ಮಂಜುನಾಥ, ಶ್ರೀಮತಿ, ಶ್ರೀ ಅಣ್ಣಪ್ಪ ಮತ್ತು ಸಹೋದರಿಯರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಹರಿಹರದರ ವಂಶಸ್ಥರು ಬಂಧು-ಮಿತ್ರರು**

# ಜಿಗಳಿಯಲ್ಲಿ ಶ್ರೀ ಸಿದ್ಧರಾಮ ಜಯಂತಿ



ಮಲೇಬೆನ್ನೂರು, ಜ.18- ಜಿಗಳಿ ಗ್ರಾಮ ಪಂಚಾಯ್ತಿ ಕಛೇರಿಯಲ್ಲಿ ಶ್ರೀ ಗುರು ಸಿದ್ಧರಾಮೇಶ್ವರರ 849 ನೇ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಗ್ರಾ.ಪಂ. ಅಧ್ಯಕ್ಷರಾದ ರೇಣುಕಾ ಪೂಜಾರ್ ನಾಗರಾಜ್, ಉಪಾಧ್ಯಕ್ಷ ಜಿ.ಬೇವಿನಹಳ್ಳಿಯ ಪಿ.ಹೆಚ್.ದೇವರಾಜ್, ಸದಸ್ಯರಾದ ಎನ್.ಎಂ. ಪಾಟೀಲ್, ಕೆ.ಜಿ.ಬಸವರಾಜ್, ಎಕ್ಕೆಗೊಂದಿ ಚೇತನ್‌ಕುಮಾರ್, ಪಿಡಿಓ ಉಮೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಿ.ಎಂ. ದೇವೇಂದ್ರಪ್ಪ, ಎಂ.ವಿ. ನಾಗರಾಜ್, ಬೇವಿನಹಳ್ಳಿಯ ಬಿ.ಕೆ.ಮಹೇಶ್ವರಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ, ಮುಖಂಡರಾದ ಜಿ.ಎಂ.ಆನಂದಪ್ಪ, ಕ್ಯಾಂಪ್ ಸಿದ್ದಪ್ಪ, ಹೆಚ್. ಈರಪ್ಪ, ಜಿ.ಆರ್.ಹಾಲೇಶ್ ಕುಮಾರ್, ಸಿ.ಎನ್. ಪರಮೇಶ್ವರಪ್ಪ, ಬೇವಿನಹಳ್ಳಿ ಎ.ಕೆ. ಸೋಮಶೇಖರ್, ಜಿ.ಪಿ.ಮಂಜುನಾಥ, ಉಪನ್ಯಾಸಕ ಕರಿಬಸಯ್ಯ, ಗ್ರಾ.ಪಂ. ಎಸ್.ಡಿ.ಎ. ಬಿ.ದಾನಪ್ಪ, ಬಿಲ್ ಕಲೆಕ್ಟರ್ ಮೌನೇಶ್, ಪತ್ರಕರ್ತ ಪ್ರಕಾಶ್ ಮತ್ತು ಇತರರು ಭಾಗವಹಿಸಿದ್ದರು.

# ಕೃಷಿ ಇಲಾಖೆಯಿಂದ ರಾಗಿ ಬೆಳೆ ಕ್ಷೇತ್ರೋತ್ಸವ

## ಬೆಳೆ ಪರಿವರ್ತನೆಗೆ ಮುಂದಾಗಲು ಶಾಸಕ ರವೀಂದ್ರನಾಥ್ ಸಲಹೆ




ದಾವಣಗೆರೆ, ಜ. 18- ಕೃಷಿ ಇಲಾಖೆ ವತಿಯಿಂದ ಅರಸಾಪುರ ಗ್ರಾಮದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಪ್ರಗತಿಪರ ರೈತ ಮಂಜಾನಾಯ್ಕ ಅವರ ಕ್ಷೇತ್ರದಲ್ಲಿ ರಾಗಿ ಬೆಳೆ ಕ್ಷೇತ್ರೋತ್ಸವ ನಡೆಸಲಾಯಿತು.

ಶಾಸಕ ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರು ಒಂದೇ ಬೆಳೆಗೆ ಅಂಟಿಕೊಳ್ಳದೆ, ಬೆಳೆ ಪರಿವರ್ತನೆ ಮಾಡುವುದು ಉತ್ತಮ ಎಂದು ಸಲಹೆ ನೀಡಿದರು.

ಇಲಾಖೆಯವರು ಭತ್ತದ ಬೆಳೆ ಹೊರತುಪಡಿಸಿ ಇತರೆ ಬೆಳೆಗಳ ಬಗ್ಗೆ ರೈತರಿಗೆ ತರಬೇತಿ ನೀಡುವ ಜೊತೆಗೆ ಜಾಗೃತಿ ಮೂಡಿಸಬೇಕು. ರಾಜ್ಯದ ಬೇರೆ ಭಾಗದ ರೈತರು ಇಲ್ಲಿಗೆ ಬಂದು ನೋಡುವಂತೆ ರಾಗಿ, ಜೋಳ ಹಾಗೂ ವಿವಿಧ ಸಿರಿಧಾನ್ಯದ ಬೆಳೆಗಳನ್ನು ಬೆಳೆಯಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಅರ್ಹ ಫಲಾನುಭವಿಗಳಿಗೆ ತುಂತುರು ನೀರಾವರಿ ಘಟಕಗಳನ್ನು ಮತ್ತು ಸಾವಯವ ಗೊಬ್ಬರ, ದ್ರವರೂಪದ ಗೊಬ್ಬರ, ಕೀಟನಾಶಕ ಮತ್ತು ರೋಗ ನಾಶಕಗಳನ್ನು ವಿತರಿಸಲಾಯಿತು.

ರಾಗಿ ಬೆಳೆಗಾರರ ಅಪೇಕ್ಷೆಯಂತೆ ಬೆಂಬಲ ಬೆಲೆಯಡಿ ಪ್ರತಿ ರೈತರಿಗೆ 20 ಕ್ವಿಂಟಾಲ್ ಬದಲಿಗೆ 50 ಕ್ವಿಂಟಾಲ್ ವರೆಗೆ ಖರೀದಿ ಕೇಂದ್ರಕ್ಕೆ ಬಿಡಲು ಅವಕಾಶ ಕಲ್ಪಿಸುವಂತೆ ಸರ್ಕಾರಕ್ಕೆ ಮನವಿ ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ರೈತರಿಗೆ ಭರವಸೆ ನೀಡಿದರು.

ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ತಾಂತ್ರಿಕ ಉಪನ್ಯಾಸ ನೀಡಿ, ಈ ಭಾಗದ ರೈತರು ಭತ್ತದ ಬದಲಾಗಿ ಸುಮಾರು 250 ಎಕರೆ ಕ್ಷೇತ್ರವನ್ನು ರಾಗಿ ಬೆಳೆಯಾಗಿ ಪರಿವರ್ತನೆ ಮಾಡಿರುವುದು ಶ್ಲಾಘನೀಯ ಎಂದರು

ಉಪ ಕೃಷಿ ನಿರ್ದೇಶಕ ಡಾ. ತಿಪ್ಪೇಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾ. ಪಂ. ಅಧ್ಯಕ್ಷೆ ಮಂಜುಳಾಬಾಯಿ ಸೇವ್ಯಾನಾಯ್ಕ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ಶಾಂತಿಬಾಯಿ ಹನುಮಂತನಾಯ್ಕ, ಸತ್ಯಬಾಬು, ರೂಪ ಧನ್ಯಕುಮಾರ್, ಮಂಜಿಬಾಯಿ ಪಾಪನಾಯ್ಕ, ನೀರು ಬಳಕೆದಾರರ ಸಂಘದ ಅಧ್ಯಕ್ಷ ಜಿ. ಹೆಚ್. ರವಿಕುಮಾರ್, ಸಹಾಯಕ ಕೃಷಿ ನಿರ್ದೇಶಕ ರೇವಣಸಿದ್ಧನಗೌಡ ಹೆಚ್.ಕೆ. ಇತರರಿದ್ದರು.

# 'ಲಾಕ್‌ಡೌನ್-3' ಜನರಲ್ಲಿ ಜಾಗೃತಿ ಮೂಡಿಸಲಿ



ಮೇಯರ್ ಎಸ್.ಟಿ.ವೀರೇಶ್

ದಾವಣಗೆರೆ, ಜ.18- ಕೊರೊನಾ ದೇಶದೆಲ್ಲೆಡೆ ಹಬ್ಬಿ, ಜನರ ನೆಮ್ಮದಿ ಜೊತೆಗೆ ಬದುಕಿಗೆ ಅಡೆ-ತಡೆ ಉಂಟು ಮಾಡಿದೆ. ಜೀವವಿದ್ದರೆ ಜೀವನ ಎನ್ನುವಂತಾಗಿದೆ ಎಂದು ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹೇಳಿದರು.

ನಗರದ ಶ್ರೀ ಸಾಯಿ ಭವನದಲ್ಲಿ ವೈಷ್ಣವಿ ಎಂ. ಫಿಲ್ಮ್ಸ್‌ರವರ ನಿವೃತ್ತ ಶಿಕ್ಷಕಿ, ದಯಾಮರಣ ಹೋರಾಟಗಾರ್ತಿ ಹೆಚ್.ಬಿ. ಕರಿಬಸಮ್ಮ ಅವರ ಆಶೀರ್ವಾದದೊಂದಿಗೆ ರಂಗ ಕಲಾವಿದ ಮಂಜುನಾಥ್ ಹೊಳೆಸಿರಿಗೆರೆ ಅವರ ಕಥೆ, ಚಿತ್ರಕಥೆ, ಸಾಹಿತ್ಯ, ಸಂಭಾಷಣೆ, ನಿರ್ದೇಶನ, ನಿರ್ಮಾಣದ 'ಲಾಕ್‌ಡೌನ್'- 3 ' ಕಿರು ಚಿತ್ರದ ಮುಹೂರ್ತ ಕಾರ್ಯಕ್ರಮಕ್ಕೆ ಕ್ಲಾಪ್ ಮಾಡಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಸಹ ಕೋವಿಡ್ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಿ, ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಕರೆ ನೀಡಿದರು. ಲಾಕ್‌ಡೌನ್-3 ಕಿರುಚಿತ್ರವು ಜನರಲ್ಲಿ ಜಾಗೃತಿ ಮೂಡಿಸುವಂತಾಗಲಿ ಮತ್ತು ರಾಜ್ಯಾದ್ಯಂತ ಪ್ರದರ್ಶನ ಕಂಡು ಯಶಸ್ಸು ಸಿಗಲಿ ಎಂದು ಹಾರೈಸಿದರು.

ಹಿರಿಯ ನ್ಯಾಯವಾದಿ ಬಳ್ಳಾರಿ ರೇವಣ್ಣ ಕ್ಯಾಮರಾ ಚಾಲನೆ ಮಾಡಿ ಮಾತನಾಡಿ, ಚಿತ್ರದಲ್ಲಿ ಬರೀ ಸರ್ಕಾರದ ಲೋಪದೋಷಗಳನ್ನು ತೋರಿಸುವಂತಾಗಬಾರದು. ಜನರ ಕರ್ತವ್ಯಗಳೇನು ?, ಕೊರೊನಾದ ವಿರುದ್ಧ ನಮ್ಮ ಹೋರಾಟವೇನು ? ಈ ಸಮಸ್ಯೆಗಳಿಂದ ಹೊರಗೆ ಹೇಗೆ ಬರಬೇಕು, ಕೊರೊನಾ ಮುಕ್ತರಾಗುವ ಬಗ್ಗೆ ಸಂದೇಶವಿರಲಿ ಎಂದರು.

ನಿರ್ಮಾಣದ ಸಂದರ್ಭದಲ್ಲಿ ಆರ್ಥಿಕ ಸಮಸ್ಯೆ ಎದುರಾದಲ್ಲಿ ನಾವು ಮತ್ತು ಕಲಾಭಿಮಾನಿಗಳು ಆರ್ಥಿಕ ನೆರವು ನೀಡಿ ಹೊರತರುವ ಪ್ರಯತ್ನ ಮಾಡಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಬಾಡಾದ ಆನಂದರಾಜ್, ಬಿ. ಚಂದ್ರಶೇಖರ್, ವೆಂಕಟೇಶ್ ಕಂದನಕೋವಿ ಮತ್ತಿತರರಿದ್ದರು.

ಮಲ್ಲಿಕಾರ್ಜುನ ಟಿ. ಜವಳಘಟ್ಟ, ಅಂಜಿನಪ್ಪ ಎಂ.ಜಿ. ಬೆಳ್ಳೂಡಿ ಇವರ ಸಹ ನಿರ್ದೇಶನವಿದೆ. ಸಿ. ಸಾನ್ವಿ ಅವರ ಸಹಕಾರವಿದ್ದು, ಎಂ.ಜಿ. ಶಿವಶಂಕರ್, ಸಂಜನ ಎಸ್., ಶ್ರೇಷ್ಠ, ಶಿವಕುಮಾರ್, ರವೀಂದ್ರ ಸಾಣೂರು, ಸೃಷ್ಠಿ ಕೆ.ವೈ., ಸೂರ್ಯ ಎನ್.ಎ., ಕೆ. ಗಿರೀಶ್, ಸಹನ ಇ., ಶಶಾಂಕ್ ಎಂ.ಎನ್., ಜಯಸೂರ್ಯ ಎನ್, ಚೇತನ್ ಕುಮಾರ್ ಜಿ, ಅಂಜಿನಪ್ಪ ಎಂ.ಜಿ., ಪುನೀತ್ ವಿ., ಶಹನಾಜ್, ಗಣೇಶ್ ಇ, ಖುಷಿ ಎ.ಜಿ., ಜಾನ್ವಿ ಎಸ್. ಅಕ್ಕಿ, ಸುಮ ಎಸ್, ಬಿಂದುಶ್ರೀ ಜೆ. ಅಭಿನಯಿಸಿದ್ದಾರೆ.

# ನ್ಯಾಯಾಲಯದ ಆದೇಶವಿದ್ದರೂ ಸಿಗದ ವೇತನ, ಪಿಂಚಣಿ ಸೌಲಭ್ಯ

ದಾವಣಗೆರೆ, ಜ.18- ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ಶಾಲಾ ಆಡಳಿತ ಮಂಡಳಿ ವೇತನ ಮತ್ತು ಪಿಂಚಣಿಯನ್ನು ನೀಡುತ್ತಿಲ್ಲ ಎಂದು ನಿವೃತ್ತ ಶಿಕ್ಷಕಿ ಕೆ.ಡಿ. ಪದ್ಮಾವತಿ ಅವರು ಸುದ್ದಿಗೋಷ್ಠಿಯಲ್ಲಿ ತಮ್ಮ ಅಳಲು ತೋಡಿಕೊಂಡರು.

1984-85 ರಲ್ಲಿ ದಾವಣಗೆರೆ ತಾಲ್ಲೂಕಿನ ರಾಂಪುರ ಮತ್ತು ಕಾಡಜ್ಜಿ ಗ್ರಾಮದ ಆರ್.ಜಿ. ನಂಜಪ್ಪ ಪ್ರೌಢಶಾಲೆಯಲ್ಲಿ ಹಿಂದಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಆಡಳಿತ ಮಂಡಳಿಯವರು ಯಾವುದೇ ಮುನ್ಸೂಚನೆ ನೀಡದೇ ಕೆಲಸದಿಂದ ತೆಗೆದು ಹಾಕಿದ್ದರು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರಿಂದ ನನಗೆ ದಿನಾಂಕ 16.9.1993 ರಲ್ಲಿ ನನ್ನನ್ನು ಕೆಲಸಕ್ಕೆ ತೆಗೆದುಕೊಂಡರು. ಪೂರ್ಣ ಸಂಬಳ ಕೊಡಬೇಕೆಂಬ ಆದೇಶವಿದ್ದರೂ, ಆಡಳಿತ ಮಂಡಳಿಯವರು ನಿರ್ಲಕ್ಷ್ಯ ವಹಿಸಿದರು ಎಂದರು. ಮತ್ತೆ 2014 ರಲ್ಲಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ವಯೋ ನಿವೃತ್ತಿ ಕಾರಣ ವೇತನ ಮತ್ತು ಪಿಂಚಣಿ ನೀಡುವಂತೆ ಕೂಡ ಆದೇಶವಾಗಿತ್ತು. ಆದರೆ ಶಿಕ್ಷಣ ಇಲಾಖೆ ಸಿಬ್ಬಂದಿ ಇದಕ್ಕೆ ಸಹಕರಿಸಲಿಲ್ಲ. ಇಲಾಖೆ ಆದೇಶವನ್ನು ಆಡಳಿತ ಮಂಡಳಿ ಪಾಲಿಸಲಿಲ್ಲ ಎಂದು ದೂರಿದರು. ನನ್ನ ವಿರುದ್ಧ ಆಡಳಿತ ಮಂಡಳಿಯವರು ಹೂಡಿದ್ದ ದಾವೆ ವಜಾಗೊಂಡಿದೆ. ಸರ್ಕಾರದ ಕಾರ್ಯದರ್ಶಿಯವರು ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ನೀಡುವಂತೆ ಆದೇಶಿಸಿದ್ದಾರೆ ಎಂದು ಮಾಹಿತಿ ನೀಡಿದರು. ಕೂಡಲೇ ನನಗೆ ಸಿಗಬೇಕಾದ ವೇತನ ಮತ್ತು ಪಿಂಚಣಿ ಸೌಲಭ್ಯಗಳನ್ನು ನೀಡುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಒತ್ತಾಯಿಸಿದರು.

## ವಿದ್ಯಾರ್ಥಿ ನಿಲಯ: ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ

ದಾವಣಗೆರೆ, ಜ. 18- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಇದೇ ದಿನಾಂಕ 27 ರವರೆಗೆ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd.hostels@karnataka.gov.in ಗೆ ಇ-ಮೇಲ್ ಮುಖಾಂತರ ಹಾಗೂ ಸಹಾಯವಾಣಿ ಸಂಖ್ಯೆ 080-8050370006 ಅಥವಾ ಜಿಲ್ಲಾ/ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಮತದಾರರನ್ನು ಕೈಬಿಟ್ಟ ಅಧಿಕಾರಿಗಳು

(1ನೇ ಪುಟದಿಂದ) ನೀಡುವ ಹಕ್ಕನ್ನು ಕಸಿದುಕೊಂಡಿದ್ದಾರೆ. ಈ ಬಗ್ಗೆ ಚುನಾವಣಾ ಆಯೋಗ, ಜಿಲ್ಲಾಧಿಕಾರಿಗಳು ಸೇರಿದಂತೆ, ಸಂಬಂಧಿಸಿದ ಅಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ ಎಂದರು.

ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಮತದಾರರ ಪಟ್ಟಿಯಲ್ಲಿ ಆಗಿರುವ ಲೋಪ ಸರಿಪಡಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಜ. 13 ರಂದು ಬಿಡುಗಡೆಯಾದ ಮತದಾರರ ಪಟ್ಟಿಯಿಂದ ಅರ್ಹ ಮತದಾರರನ್ನು ತೆಗೆದು ಹಾಕಲಾಗಿದೆ. ನಗರದ ಬೇರೆ ಯಾವ ಭಾಗದಲ್ಲೂ ಈ ರೀತಿ ಆಗಿಲ್ಲ. ಈ ಭಾಗದಲ್ಲಿ ಮಾತ್ರ ರಾಜಕೀಯ ದುರುದ್ದೇಶದಿಂದ, ಏಕಪಕ್ಷೀಯ ನಿರ್ಧಾರ ಕೈಗೊಳ್ಳಲಾಗಿದೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಹಿರಿಯ ಸದಸ್ಯರಾದ ಕೆ. ಚಮನ್‌ಸಾಬ್, ಗಡಿಗುಡಾಳ್ ಮಂಜುನಾಥ್, ಯುವ ಮುಖಂಡ ಯುವರಾಜ್ ವಿನೋಬನಗರದ ನಿವಾಸಿಗಳಾದ ಹೆಚ್.ಎಂ. ರುದ್ರೇಶ್, ಪ್ರವೀಣ್, ರವಿ, ಸತೀಶ್ ಉಪಸ್ಥಿತರಿದ್ದರು.

**ಖಂಡನೆ:** ದೆಹಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪ್ರದರ್ಶನಕ್ಕೆ ಶಿಫಾರಸ್ಸು ಮಾಡಲಾಗಿದ್ದ ನಾರಾಯಣ ಗುರು ಮತ್ತು ಸುಭಾಷ್ಚಂದ್ರ ಬೋಸ್ ಅವರ ಸ್ತಬ್ಧ ಚಿತ್ರಗಳನ್ನು ತಿರಸ್ಕಾರ ಮಾಡಿರುವುದಕ್ಕೆ ಪಾಲಿಕೆ ಸದಸ್ಯ ಕೆ. ಚಮನ್‌ಸಾಬ್ ತೀವ್ರವಾಗಿ ಖಂಡಿಸಿದರು.

ಈ ಕೂಡಲೇ ಸಮಿತಿ ಪರಾಮರ್ಶಿಸಿ ಪ್ರದರ್ಶನಕ್ಕೆ ಅವಕಾಶ ನೀಡುವಂತೆ ಅವರು ಆಗ್ರಹಿಸಿದರು.

## ಎನ್‌ಎಂಎಂಎಸ್ ಪರೀಕ್ಷೆಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ಜ. 18- ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ನವದೆಹಲಿ ಇವರ ಮಾರ್ಗಸೂಚಿಯಂತೆ ನ್ಯಾಷನಲ್ ಮೀನ್ಸ್ ಕಂ ಮೆರಿಟ್ ಸ್ಕಾಲರ್‌ಶಿಪ್ (ಎನ್‌ಎಂಎಂಎಸ್) ಪರೀಕ್ಷೆಯನ್ನು ಫೆಬ್ರವರಿ 27 ರಂದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಕೆಎಸ್‌ಕ್ಯೂಎಎಸಿ ವತಿಯಿಂದ ನಡೆಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪರೀಕ್ಷೆಯ ಆನ್‌ಲೈನ್ ಅರ್ಜಿಯು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ http://sslc.karnataka.gov.in ವೆಬ್‌ಸೈಟ್ ನಲ್ಲಿ ಲಭ್ಯವಿರುತ್ತದೆ. ಶಾಲಾ ಮುಖ್ಯ ಶಿಕ್ಷಕರು ತಮ್ಮ ಶಾಲೆಯ ವಿದ್ಯಾರ್ಥಿಗಳ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಮಂಡಳಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಎನ್‌ಎಂಎಂಎಸ್ ಲಾಗಿನ್‌ನಲ್ಲಿ ಸಲ್ಲಿಸಬೇಕು. ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಇದೇ ದಿನಾಂಕ 20 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕೆಎಸ್‌ಕ್ಯೂಎಎಸಿ ಕಚೇರಿ ದೂಸಂ : 080-23341615 ಅನ್ನು ಸಂಪರ್ಕಿಸಬಹುದೆಂದು ಡಯಟ್‌ನ ಪ್ರಾಚಾರ್ಯರು ಹಾಗೂ ಪದನಿಮಿತ್ತ ಉಪನಿರ್ದೇಶಕರು ತಿಳಿಸಿದ್ದಾರೆ.

## ನಾಡ ಕಚೇರಿಯಲ್ಲಿ ಸಿದ್ದರಾಮ ಜಯಂತಿ



ಮಲೇಬೆನ್ನೂರು, ಜ.18- ಇಲ್ಲಿನ ನಾಡ ಕಚೇರಿಯಲ್ಲಿ ಕಾಯಕ ಯೋಗಿ ಶ್ರೀಗುರು ಸಿದ್ದರಾಮೇಶ್ವರರ ಜಯಂತಿಯನ್ನು ಶನಿವಾರ ಆಚರಿಸಲಾಯಿತು. ಉಪತಹಶೀಲ್ದಾರ್ ಆರ್.ರವಿ ಅವರು ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಸಹಾಯಕ ಅಂಜಿನಪ್ಪ, ಬಸವರಾಜ್, ಪುರಸಭೆ ಸದಸ್ಯ ಭೋವಿ ಶಿವು, ಭೋವಿಕುಮಾರ್, ಯುನೂಸ್ ಮತ್ತಿತರರು ಭಾಗವಹಿಸಿದ್ದರು.

# ಒತ್ತುವರಿ ಜಮೀನು ತೆರವುಗೊಳಿಸಿ, 30 ಅಡಿ ಜಿಲ್ಲಾ ರಸ್ತೆ ನಿರ್ಮಿಸಲು ಆಗ್ರಹ



ದಾವಣಗೆರೆ, ಜ.18- ಒತ್ತುವರಿ ಮಾಡಿಕೊಂಡ ಜಮೀನನ್ನು ವಶಪಡಿಸಿಕೊಳ್ಳುವ ಜೊತೆಗೆ ನಕಾಶೆಗೆ ಅನುಗುಣವಾಗಿ 30 ಅಡಿ ರಸ್ತೆಯನ್ನು ನಿರ್ಮಿಸುವ ಮೂಲಕ ಜಿಲ್ಲಾ ಮುಖ್ಯ ರಸ್ತೆಯನ್ನಾಗಿಸಿ, ಹಲವಾರು ಗ್ರಾಮಗಳು ಸೇರಿದಂತೆ, ವಿವಿಧ ಉದ್ಯಮಗಳು, ಪರಿಶಿಷ್ಟ ಜಾತಿ ಮತ್ತು ಪಂಗಡ ವಾಸಿಸುವ ಕಾಲೋನಿಗಳು, ಶ್ರಮಿಕರಿಗಾಗಿಯೇ ನಿರ್ಮಿಸಿರುವ ಶ್ರಮಜೀವಿ ಬಡಾವಣೆಗೆ ಓಡಾಡಲು ಅನುವು ಮಾಡಿಕೊಡುವಂತೆ ಒತ್ತಾಯಿಸಿ ತಹಶೀಲ್ದಾರ್ ಕಚೇರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ ಎಐಟಿಯುಸಿ ಜಿಲ್ಲಾ ಘಟಕದಿಂದ ತಾಲ್ಲೂಕು ಆಡಳಿತಕ್ಕೆ ಮನವಿ ಅರ್ಪಿಸಲಾಯಿತು.

ದಾವಣಗೆರೆ ನಗರದ ತಾಲ್ಲೂಕು ಕಚೇರಿಯಲ್ಲಿ ಮಂಗಳವಾರ ಉಪ ತಹಶೀಲ್ದಾರ್ ದೇವರಾಜು ಅವರಿಗೆ ಸಂಘಟನೆಯ ರಾಜಾಧ್ಯಕ್ಷ ಹೆಚ್.ಜಿ.ಉಮೇಶ್ ಆವರಗೆರೆ ನೇತೃತ್ವದಲ್ಲಿ ತೆರಳಿದ ನಿಯೋಗವು ಮನವಿ ಸಲ್ಲಿಸಿ, ರಸ್ತೆ ನಿರ್ಮಿಸುವಂತೆ ಒತ್ತಾಯಿಸಿತು.

ಇದೇ ವೇಳೆ ಮಾತನಾಡಿದ ಹೆಚ್.ಜಿ. ಉಮೇಶ್, ದಾವಣಗೆರೆ ತಾಲ್ಲೂಕಿನ ಮಲ್ಲಶೆಟ್ಟಿಹಳ್ಳಿ ರಿ.ಸನಂ 5, 7, 8ರಲ್ಲಿ ನಕಾಶೆ ರಸ್ತೆಗೆ ಲಗತ್ತಾದ ಜಮೀನನ್ನು ಅಕ್ಕಪಕ್ಕದಲ್ಲಿ ಒತ್ತುವರಿ ಮಾಡಲಾಗಿದೆ. ಇದನ್ನು ತೆರವುಗೊಳಿಸಿ 30 ಅಡಿ ಜಿಲ್ಲಾ ರಸ್ತೆ ನಿರ್ಮಿಸಲು ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಮಲ್ಲಶೆಟ್ಟಿಹಳ್ಳಿ ಗ್ರಾಮದಿಂದ ಮುಂದೆ ಕುರ್ಕಿ, ಹನುಮನಹಳ್ಳಿ, ಈಚಘಟ್ಟ, ಕರೆಲಕ್ಕೇನಹಳ್ಳಿ ಸೇರಿದಂತೆ ಇತರೆ ಭಾಗದ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸಿದಂತಾಗುತ್ತದೆ. ಅಲ್ಲದೇ ಇದೇ ಮಾರ್ಗವಾಗಿ ಕೆಲ ಉದ್ಯಮಗಳು ಇದ್ದು ಅವರಿಗೂ ಅನುಕೂಲ ಆಗಲಿದೆ.

ಇದೆಲ್ಲದಕ್ಕಿಂತ ಮುಖ್ಯವಾಗಿ ಎಸ್.ಸಿ. ಎಸ್‌ಟಿ ಜನಾಂಗದ ಕಾಲೋನಿ, ಶ್ರಮಿಕರಿಗಾಗಿಯೇ ನಿರ್ಮಿಸಿರುವ ಶ್ರಮಜೀವಿ ಪಂಪಾಪತಿ ಕಟ್ಟಡ ಕಾರ್ಮಿಕರ ಬಡಾವಣೆ ಇದ್ದು, 30 ಅಡಿ ರಸ್ತೆ ನಿರ್ಮಿಸಿದರೆ ಎಲ್ಲರಿಗೂ ಅನುಕೂಲ ಆಗಲಿದೆ ಎಂದು ಮನವರಿಕೆ ಮಾಡಿದರು.

ಇದಲ್ಲದೇ, ಆನಗೋಡು ಹೋಬಳಿಯ ಮಲ್ಲಶೆಟ್ಟಿಹಳ್ಳಿ ರಿ.ಸನಂ 5, 7, 8ರಲ್ಲಿ ಪ್ರಥಮಾದ್ಯತೆ ಮೇಲೆ ನಕಾಶೆ ರಸ್ತೆ ಮಾಡಿಸಿಕೊಡಬೇಕು. ರಸ್ತೆಗೆ ಅಗತ್ಯ ಜಾಗವನ್ನು ಆಯಾ ಜಮೀನು ಮಾಲೀಕರೊಂದಿಗೆ ಚರ್ಚಿಸಿ, ರಸ್ತೆಗೆ ಜಾಗ ಕಲ್ಪಿಸಬೇಕು. ಗ್ರಾಮ ನಕಾಶೆಯಲ್ಲಿರುವಂತೆ ರಸ್ತೆ ಆಗಬೇಕು. ಮಾತ್ರವಲ್ಲದೇ ರಸ್ತೆ ಅಭಿವೃದ್ಧಿಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಈ ವೇಳೆ ರೈತ ಮುಖಂಡ ಅಂಜಿನಪ್ಪ ಪೂಜಾರ, ಪಾಮೇನಹಳ್ಳಿ ಮಂಜುನಾಥ್ ಇದ್ದರು.

## ಜಿಲ್ಲೆಯಲ್ಲಿ ಕಾಡದ ಮೂರನೇ ಅಲೆ

(1ನೇ ಪುಟದಿಂದ) ಕಾರಣ ಎಂದವರು ಹೇಳಿದ್ದಾರೆ. ಯಾವುದೇ ವೈರಸ್ ಮಹಾಮಾರಿಯಂತೆ ಹರಡಿದ ನಂತರ ಅದರ ಸಾಮರ್ಥ್ಯ ಕಡಿಮೆಯಾಗುತ್ತಾ ಹೋಗುತ್ತದೆ. ಸಮುದಾಯದಲ್ಲಿ ರೋಗ ಹರಡಿ ದೊಡ್ಡ ಸಂಖ್ಯೆಯ ಜನರಲ್ಲಿ ರೋಗ ನಿರೋಧಕತೆ ಉಂಟಾಗುವುದೇ ಇದಕ್ಕೆ ಕಾರಣ. ಅಲ್ಲದೇ, ನಿರಂತರ ಮ್ಯುಟೇಷನ್ ಕಾರಣದಿಂದ, ವೈರಸ್ ಹೆಚ್ಚು ವೇಗವಾಗಿ ಹರಡಿದರೂ ಅದರ ತೀವ್ರತೆ ಕಡಿಮೆಯಾಗುತ್ತದೆ ಎಂದು ರಾಘವನ್ ವಿವರಿಸಿದ್ದಾರೆ.

ದೇಹದಲ್ಲಿ ಮೊದಲೇ ಆಂಟಿಬಡಿಗಳು ಇದ್ದ ಸಂದರ್ಭದಲ್ಲಿ, ಸೋಂಕು ಬಂದಾಗ ತ್ವರಿತವಾಗಿ ಚಿಕಿತ್ಸೆ ಆರಂಭಿಸುವುದು ರೋಗ ತೀವ್ರತೆ ಕಡಿಮೆ ಮಾಡಲು ನೆರವಾಗುತ್ತದೆ ಎಂದವರು ಹೇಳಿದ್ದಾರೆ.

## ಹರಿಹರ : ಧಾರ್ಮಿಕ ಕೇಂದ್ರಗಳ ಸ್ವಚ್ಛತಾ ಸಪ್ತಾಹ



ಹರಿಹರ, ಜ. 18- ನಗರದಲ್ಲಿ ಇದೇ 1 ರಿಂದ 14ರವರೆಗೆ ನಡೆದ 64 ಧಾರ್ಮಿಕ ಕೇಂದ್ರಗಳ ಸ್ವಚ್ಛತಾ ಸಪ್ತಾಹ ಕಾರ್ಯಕ್ರಮವನ್ನು ಗ್ರಾಮಾಭಿವೃದ್ಧಿ ಯೋಜನೆ, ಒಕ್ಕೂಟದವರು ಮತ್ತು ಸ್ಥಳೀಯರ ಸಹಕಾರದೊಂದಿಗೆ ದೇವಸ್ಥಾನಗಳ ಗರ್ಭಗುಡಿ, ಆವರಣ, ವಠಾರ ಮತ್ತು ಪೂಜಾ ಪರಿಕರಗಳನ್ನು ಶ್ರದ್ಧಾಳುಗಳು ಸ್ವಯಂ ಪ್ರೇರಣೆಯಿಂದ ಶುಚಿಗೊಳಿಸಿದರು.

ನಗರದ ಮೌನೇಶ್ವರ ದೇವಸ್ಥಾನದಿಂದ ಚಾಲನೆ ನೀಡಲಾಗಿದ್ದು ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹರಿಹರ ಯೋಜನಾಧಿಕಾರಿ ಗಣಪತಿ ಮಾಳಂಜಿ, ಮೇಲ್ವಿಚಾರಕರಾದ ಸಂಗೀತಾ, ಯಶೋಧ, ಗಂಗಮ್ಮ, ದುರ್ಗಾಭವಾನಿ, ಕೃಷಿ ಮೇಲ್ವಿಚಾರಕ ಸುನೀಲ್, ಆಂತರಿಕ ಲೆಕ್ಕಪರಿಶೋಧಕ ಲೋಕೇಶ್, ಒಕ್ಕೂಟದ ಪದಾಧಿಕಾರಿಗಳು, ಸದಸ್ಯರು, ಸ್ಥಳೀಯರು, ಸೇವಾಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಸೇವಾಪ್ರತಿನಿಧಿ ಸಿದ್ದಮ್ಮ ಸ್ವಾಗತಿಸಿದರು, ಮೇಲ್ವಿಚಾರಕ ಚಂದ್ರಹಾಸ್ ಬಿ. ನಾಯ್ಕ್ ವಂದಿಸಿದರು. ವಲಯ ಮೇಲ್ವಿಚಾರಕ ಪ್ರವೀಣ್ ನಿರೂಪಿಸಿದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ 'ಎ' ಮತ್ತು 'ಬಿ' ಬ್ಲಾಕ್, ಜಯನಗರ 'ಎ', 'ಬಿ' ಮತ್ತು 'ಸಿ' ಬ್ಲಾಕ್ ಭೂಮಿಕ ನಗರ, ಜೆ.ಎನ್. ಕಾನ್ವೆಂಟ್ ಕೆಎಸ್‌ಎಸ್ ಕಾಲೇಜ್ ಮತ್ತು ಸುತ್ತಮುತ್ತ ಪ್ರದೇಶ ಗಳಲ್ಲಿ ಹಾಗೂ ಎಸ್. ಎಸ್. ಬಡಾವಣೆ 'ಬಿ' ಬ್ಲಾಕ್, ಕುಂದುವಾಡ ರಸ್ತೆ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಾರಿಶಕ್ತಿ ಪುರಸ್ಕಾರಕ್ಕಾಗಿ ಅರ್ಜಿ

ದಾವಣಗೆರೆ, ಜ. 18- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕೇಂದ್ರ ಸರ್ಕಾರ ಕೊಡಮಾಡುವ ನಾರಿಶಕ್ತಿ ಪುರಸ್ಕಾರಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಸಮಾಜದಲ್ಲಿನ ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅರ್ಹ ಮಹಿಳೆಯರು ನಾರಿಶಕ್ತಿ ಪುರಸ್ಕಾರಕ್ಕಾಗಿ ವೆಬ್‌ಸೈಟ್ www.awards.gov.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇದೇ 31ರ ಸೋಮವಾರ ಕೊನೆ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಎಂ.ಸಿ.ಸಿ. ಬಿ ಬ್ಲಾಕ್, 14ನೇ ಕ್ರಾಸ್, ಕುವೆಂಪು ನಗರ, ದಾವಣಗೆರೆ-04, ದೂರವಾಣಿ 08192-264056 ಕ್ಕೆ ಸಂಪರ್ಕಿಸಬಹುದು.


## ಸಾರ್ವಜನಿಕರ ಗಮನಕ್ಕೆ

ನಮ್ಮ ಕಕ್ಷಿದಾರರಾದ **ಶ್ರೀಮತಿ ಶೀಲಾ ಎಂ.ವಿ ಕೋಂ ಹೆಚ್.ಪಿ ಅನಿಲ್ ಗೌಡ,** ವಾಸ: #2035/51, 8ನೇ ಮುಖ್ಯ ರಸ್ತೆ, ಆಂಜನೇಯ ಬಡಾವಣೆ, ದಾವಣಗೆರೆ, ಇವರು ನೀಡಿದ ಮಾಹಿತಿ ಮೇರೆಗೆ ಸಾರ್ವಜನಿಕರ ಗಮನಕ್ಕೆ ತಿಳಿಸುವುದೇನೆಂದರೆ:-

ನಮ್ಮ ಕಕ್ಷಿದಾರರಾದ **ಶ್ರೀಮತಿ ಶೀಲಾ ಎಂ.ವಿ. ಕೋಂ ಹೆಚ್.ಪಿ. ಅನಿಲ್ ಗೌಡ,** ದಾವಾ ಆಸ್ತಿಯಲ್ಲಿ ಕಾನೂನಾತ್ಮಕವಾದ ಹಕ್ಕು ಇದ್ದು, ಅವರನ್ನು ಹೊರತುಪಡಿಸಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದು, ಸದರಿ ಆಸ್ತಿಯ ಬಗ್ಗೆ ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ, ದಾವಣಗೆರೆಯಲ್ಲಿ ಓ.ಎಸ್. ನಂ. 22/2022 ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ **ಶ್ರೀಮತಿ ನಾಗರತ್ನಮ್ಮ ಮತ್ತು ಇತರರನ್ನು** ಪ್ರತಿವಾದಿಗಳನ್ನಾಗಿ ಮಾಡಿದ್ದು ಸದರಿಯವರು ಷೆಡ್ಯೂಲ್ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿಗಾರರಿಗೆ ದಾವಾ ಆಸ್ತಿಯಲ್ಲಿ ಕಾನೂನಾತ್ಮಕವಾದ ಹಕ್ಕು ಇರುವುದರಿಂದಲೂ ಹಾಗೂ ಸದರಿ ಆಸ್ತಿಯ ಬಗ್ಗೆ ಮೇಲ್ಕಂಡ ದಾವೆಯು ಪೆಂಡಿಂಗ್ ಇರುವುದರಿಂದಲೂ ಯಾರಾದರೂ ಈ ಆಸ್ತಿಯನ್ನಾಗಲೀ ಅಥವಾ ಅದರಲ್ಲಿ ಮಾಡಲ್ಪಡುವ ಸೈಟುಗಳನ್ನಾಗಲೀ ಕೊಂಡುಕೊಂಡಲ್ಲಿ ಸದರಿ ಖರೀದಿಯು ನನ್ನ ಕಕ್ಷಿದಾರರ ಹಕ್ಕಿಗೆ ಬಾಧಿಸುವುದಿಲ್ಲ.

**ಷೆಡ್ಯೂಲ್**

1) ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ಶಾಮನೂರು ಗ್ರಾಮದ ಸ.ನಂ. 206/1ರ ವಿಸ್ತೀರ್ಣ 01 ಎಕರೆ 17 ಗುಂಟೆ ಸ್ವೊತ್ತಿಗೆ ಚೆಕ್ಕುಬಂದಿ :-

ಪೂರ್ವ : ಸಂಕಪ್ಪಲ ಭೀಮಪ್ಪರವರ ಜಮೀನು, ಪಶ್ಚಿಮ : 4ನೇ ಪಾರ್ಟಿಯ ಹಿಸ್ಸೆ, ಉತ್ತರ : 2ನೇ ಪಾರ್ಟಿಯ ಹಿಸ್ಸೆ, ದಕ್ಷಿಣ : ಬಿದ್ದಪ್ಪಲ ಕರಿಸಿದ್ದಪ್ಪನವರ ಜಮೀನು.

2) ದಾವಣಗೆರೆ ಸಬ್ ರಿಜಿಸ್ಟ್ರಾರ್ ಅಧಿಕಾರಕ್ಕೆ ಒಳಪಟ್ಟ ಆಂಜನೇಯ ಬಡಾವಣೆಯ ಸೈಟ್ ನಂ. 49 #564/49-2 ಉತ್ತರ ಭಾಗದ ವಿಸ್ತೀರ್ಣ 18½ x 43 ವಾಸದ ಮನೆಗೆ ಚಕ್ಕುಬಂದಿ :-

ಪೂರ್ವ : ಸೈಟ್ ನಂ. 48, ಪಶ್ಚಿಮ : 4ನೇ ಪಾರ್ಟಿಯ ಹಿಸ್ಸೆ, ಉತ್ತರ : 3 ಅಡಿ ಪ್ಯಾಸೇಜ್, ದಕ್ಷಿಣ : ರಸ್ತೆ.

3) ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ಆಂಜನೇಯ ಬಡಾವಣೆಯ ಸೈಟ್ ನಂ. 83/3 #802/83-3 ವಿಸ್ತೀರ್ಣ ಪೂರ್ವ-ಪಶ್ಚಿಮ 30 ಅಡಿ, ಉತ್ತರ-ದಕ್ಷಿಣ : ಪೂರ್ವಕ್ಕೆ 15 ಅಡಿ, ದಕ್ಷಿಣಕ್ಕೆ 8 ಅಡಿ (30x15+8/2) ವಾಸದ ಮನೆಗೆ ಚೆಕ್ಕುಬಂದಿ :-

ಪೂರ್ವ : ಶಿವಪ್ಪನವರ ಖಾಲಿ ಜಾಗ, ಪಶ್ಚಿಮ : ರಸ್ತೆ, ಉತ್ತರ : ರಸ್ತೆ, ದಕ್ಷಿಣ : ರಸ್ತೆ.

**ಕಕ್ಷಿದಾರರು** **(ಶ್ರೀಮತಿ ಲೀಲಾ ಎಂ.ವಿ.)**

**ಕಕ್ಷಿದಾರರ ಪರ ವಕೀಲರು** **(ಹೆಚ್.ವಿ. ರಾಮದಾಸ್)**

**ಸ್ಥಳ : ದಾವಣಗೆರೆ**
**ದಿನಾಂಕ : 17-01-2022**


# ಸರಳವಾಗಿಯಾದರೂ ಅರ್ಥಪೂರ್ಣ ಗಣರಾಜ್ಯೋತ್ಸವಕ್ಕೆ ಜಿಲ್ಲಾಡಳಿತದ ನಿರ್ಧಾರ

ದಾವಣಗೆರೆ, ಜ.18 - ಇದೇ ದಿನಾಂಕ 26 ರಂದು ಜಿಲ್ಲಾ ಕೇಂದ್ರದಲ್ಲಿ 73 ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಸರಳವಾಗಿಯಾದರೂ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ಹೇಳಿದ್ದಾರೆ.

ಗಣರಾಜ್ಯೋತ್ಸವ ಆಚರಣೆ ಕುರಿತಂತೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಪೂರ್ವಸಿದ್ದತಾ ಸಭೆಯಲ್ಲಿ ಭಾಗವಹಿಸಿ, ಅವರು ಮಾತನಾಡುತ್ತಿದ್ದರು.

ಕೊರೊನಾ ಕಾರಣದಿಂದಾಗಿ ಈ ವರ್ಷವೂ ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದು. ಇದೇ ದಿನಾಂಕ 26ರ ಬುಧವಾರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಲಿದೆ. ಎಲ್ಲಾ ಇಲಾಖಾ ಮುಖ್ಯಸ್ಥರು ತಮ್ಮ ತಮ್ಮ ಕಚೇರಿಗಳಲ್ಲಿ ನಿಯಮಾನುಸಾರ ಧ್ವಜಾರೋಹಣ ನೆರವೇರಿಸಿ, ಬೆಳಿಗ್ಗೆ 8.30 ಗಂಟೆಯೊಳಗಾಗಿ ಕ್ರೀಡಾಂಗಣದಲ್ಲಿ ಹಾಜರಿರಬೇಕು ಎಂದವರು ತಿಳಿಸಿದರು.


ಶಾಲಾ ಮಕ್ಕಳು ಅಥವಾ ಸಾರ್ವಜನಿಕರು ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿಲ್ಲ. ಆದರೆ, ಅಧಿಕಾರಿ ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರಬೇಕು ಎಂದರು.

ಪಥ ಸಂಚಲನದಲ್ಲಿ ಪೊಲೀಸ್, ಅರಣ್ಯ, ಅಗ್ನಿಶಾಮಕ ಇಲಾಖೆಗಳ ಜೊತೆಗೆ ಗೃಹರಕ್ಷಕ ದಳದ ತಂಡಗಳು ಪಥಸಂಚಲನದಲ್ಲಿ ಪಾಲ್ಗೊಳ್ಳಲಿವೆ. ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ಅಸಾಧಾರಣ ಸಾಧನೆ ಮಾಡಿದ ಜಿಲ್ಲೆಯ ಮಕ್ಕಳಿಗೆ ಸರ್ಕಾರದಿಂದ ನೀಡಲಾಗುವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು. ಅಲ್ಲದೆ, ಕೃಷಿಯಲ್ಲಿ ಉತ್ತಮ ಸಾಧನೆಗೈದ ರೈತರಿಗೆ ಕೃಷಿ ಇಲಾಖೆಯಿಂದ ನೀಡಲಾಗುವ ಪ್ರಶಸ್ತಿಯನ್ನು ಇದೇ ಸಂದರ್ಭದಲ್ಲಿ ನೀಡಿ ಸನ್ಮಾನಿಸಲಾಗುವುದು ಎಂದರು.

ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಮಾತನಾಡಿ, ಎಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗೂ ಪ್ರಮುಖ ಖಾಸಗಿ ಕಚೇರಿಗಳ ಮೇಲೆ ಜ.25 ಮತ್ತು 26 ರಂದು ವಿದ್ಯುತ್ ದೀಪಾಲಂಕಾರ ಮಾಡಿಸಬೇಕು. ಧ್ವಜ ಸಂಹಿತೆ ಕುರಿತಂತೆ ಜ. 24 ರಂದು ದಾವಣಗೆರೆಯ ಡಿ. ಆರ್. ಕಚೇರಿ ಆವರಣದಲ್ಲಿ ಸೇವಾದಳದ ವತಿಯಿಂದ ಎಲ್ಲ ಇಲಾಖೆಗಳಿಗೆ ತರಬೇತಿ ಏರ್ಪಡಿಸಲಾಗಿದೆ ಎಂದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮಗೊಂಡ ಬಸರಗಿ, ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಸಮಾಜ ಕಲ್ಯಾಣಾಧಿಕಾರಿ ರೇಷ್ಮಾ ಕೌಸರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಜಿ. ನಜ್ಮಾ ಮತ್ತಿತರರು ಉಪಸ್ಥಿತರಿದ್ದರು.


**ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು**
**Most Populr Astrologer**



ಉಚಿತ ಭವಿಷ್ಯ ಖಚಿತ ಪರಿಹಾರ, ಫೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ಧ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ
ಮೊಬೈಲ್ : **89716 99826**



**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚನ್ನಗಿರಿ.**
ಚನ್ನಗಿರಿ, ಎನ್.ಹೆಚ್–13, ದಾವಣಗೆರೆ ಜಿಲ್ಲೆ ಪಿನ್–577213
ದೂ.ಸಂಖ್ಯೆ:08189–228038 Email:-channagiriapmc@rediffmail.com

ಕ್ರ.ಸಂ:ಕೃಮಾಇ:ಕೃಉಮಾಸ[ಚ]/ಲೀಲೈ/639/2021–22
ದಿನಾಂಕ: 17.01.2022

**ಪ್ರಕಟಣೆ: 1**

ಈ ಮೂಲಕ ಸಮಿತಿಯಿಂದ ಲೈಸೆನ್ಸ್ ಪಡೆದ ಎಲ್ಲಾ ಪೇಟೆಕಾರ್ಯಕರ್ತರು, ರೈತರಿಗೆ ಹಾಗೂ ಸಾರ್ವಜನಿಕರುಗಳಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಪೇಟೆಕಾರ್ಯಕರ್ತರಾದ ಶ್ರೀ ಅಲ್ಲಮಪ್ರಭು ಟ್ರೇಡರ್ಸ್ ಇವರಿಗೆ ಮಳಿಗೆ ಸಂಖ್ಯೆ ಎ,ಪಿ,ಜಿ 01ನ್ನು ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ಹಂಚಿಕೆ ಮಾಡಿ ಅವಧಿ ಮುಗಿದ ನಂತರ ಗರಿಷ್ಟ 55 ತಿಂಗಳಿಗೆ ನಿಯಮಾನುಸಾರ ಮುಂದುವರೆಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ದೊರೆತಿದ್ದು, ಈ ಸಂದರ್ಭದಲ್ಲಿ ಸದರಿ ಮಾಲೀಕರು ನಿಧನರಾಗಿರುತ್ತಾರೆ. ಕಾರಣ ಕಾನೂನು ವಾರಸುದಾರದ ಅವರ ಪುತ್ರ ಶ್ರೀ ಪ್ರಭು ಅಲ್ಲಮಪ್ರಭು ಟ್ರೇಡರ್ಸ್ ಇವರ ಇವರ ಪ್ರಸ್ತುತ ವ್ಯವಹಾರ ನಿರ್ವಹಣೆ ಮಾಡುತ್ತಿದ್ದು, ತಂದೆಯವರ ಮರಣದ ಕಾರಣ ಮಳಿಗೆ ಸಂಖ್ಯೆ ಎ,ಪಿ,ಜಿ 01ನ್ನು ಇವರ ಹೆಸರಿಗೆ ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ಗರಿಷ್ಟ 55 ತಿಂಗಳ ಅವಧಿಗೆ ಹಂಚಿಕೆ ಮಾಡಿ ಕೊಡಲು ಕೋರಿಕೊಂಡಿರುತ್ತಾರೆ. ಪ್ರಯುಕ್ತ ಸದರಿ ಪೇಟೆಕಾರ್ಯಕರ್ತರು ಯಾವುದೇ ತರಹದ ಬಾಕಿ ಹಣವನ್ನು ಕೊಡಬೇಕಾದಲ್ಲಿ ಅಥವಾ ತಂಟೆ ತಕರಾರು ಮತ್ತು ಯಾವುದಾದರೂ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 07 ದಿನಗಳೊಳಗಾಗಿ ಈ ಕಛೇರಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬಂದಂತಹ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಚನ್ನಗಿರಿ.

ಸಹಿ/–ಅಧ್ಯಕ್ಷರು, ಕೃ.ಉ.ಮಾ.ಸ., ಚನ್ನಗಿರಿ.

ವಾಸಾಇ/ಡಿವಿಜಿ/637/ಎಂಸಿಎ/2021–22

# ಸಮಗಾರ ಸಮಾಜದವರಿಗೆ ನಿವೇಶನ ನೀಡಲು ಕ್ರಮ : ಶಾಸಕ ರಾಮಪ್ಪ ಭರವಸೆ



ಹರಿಹರ, ಜ.18- ಬಡ ಕುಟುಂಬಗಳ ಏಳಿಗೆಗಾಗಿ ರಾಜ್ಯ ಸರ್ಕಾರ ಅನೇಕ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಅದನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳುವಂತೆ ಶಾಸಕ ಎಸ್. ರಾಮಪ್ಪ ಕರೆ ನೀಡಿದ್ದಾರೆ.

ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೌಶಲ್ಯ ಅಭಿವೃದ್ಧಿ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ತರಬೇತಿ ಮತ್ತು ಹರಳಯ್ಯ ಸಮಗಾರ ಸಮಾಜದ ಕುಟುಂಬಗಳಿಗೆ 30 ರಾಟಿ ಯಂತ್ರಗಳ ವಿತರಣೆ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಸಣ್ಣ ವ್ಯಾಪಾರ ಸರಿಯಾದ ರೀತಿಯಲ್ಲಿ ಮಾಡಿದರೆ ಅದು ದೊಡ್ಡ ಪ್ರಮಾಣದಲ್ಲಿ ಸಾಗಿ ಉತ್ತಮ ಫಲವನ್ನು ನೀಡುತ್ತದೆ. ನಾನು ಚೆನ್ನಾಗಿ ಸಮಾಜದಲ್ಲಿ ಬಾಳಬೇಕು ಎಂಬ ಛಲವನ್ನು ಸಮಗಾರ ಸಮಾಜದವರು ಹೊಂದಬೇಕು ಎಂದವರು ಕಿವಿಮಾತು ಹೇಳಿದರು.

ನಗರಸಭೆಯ ಸದಸ್ಯರ ಜೊತೆಯಲ್ಲಿ ಮಾತನಾಡಿ, ಸಮಗಾರ ಸಮಾಜಕ್ಕೆ ಮನೆಗಳ ನಿರ್ಮಾಣ ಮಾಡುವುದಕ್ಕೆ ಜಾಗ ನೀಡುವುದಕ್ಕೆ ಮುಂದಾಗುವುದಾಗಿ ಹೇಳಿದರು.

ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ರೊ. ಲಿಂಗಪ್ಪ ಮಾತನಾಡಿ, ಮಹಿಳೆಯರು ಆರ್ಥಿಕವಾಗಿ ಹಣ ಗಳಿಕೆ ಮಾಡುವುದಕ್ಕೆ ನಮ್ಮಲ್ಲಿ ಅನೇಕ ಯೋಜನೆಗಳು ಇವೆ. ಇವುಗಳನ್ನು ಸದ್ಬಳಕೆ ಮಾಡಿಕೊಳ್ಳಿ. ಸಹಾಯಧನ, ಕಿಟ್, ತರಬೇತಿ ನೀಡುತ್ತಿರುವುದು ಉತ್ತಮವಾಗಿ ಉಪಯೋಗಿಸಿಕೊಳ್ಳಿ ಎಂದು ಕರೆ ನೀಡಿದರು.

ಸ್ಥಳೀಯ ಶಾಸಕರು ಮೂರು ಎಕರೆ ಜಮೀನು ನೀಡಿದರೆ ಇಲ್ಲಿನ ಸಮಗಾರ ಜನಾಂಗದ ಬಡವರಿಗೆ ಮನೆಕಟ್ಟುವುದಕ್ಕೆ ಸಿದ್ಧನಿರುವುದಾಗಿ ಹೇಳಿದರು.

ಜಿಲ್ಲೆಯ ಚರ್ಮ ಕೌಶಲ್ಯ ಅಭಿವೃದ್ಧಿ ಅಧಿಕಾರಿ ರುದ್ರೇಶ್ ಮಾತನಾಡಿ, ಚರ್ಮ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆ ವತಿಯಿಂದ ಸಾಲ ಸೌಕರ್ಯಗಳನ್ನು ನೀಡಲಾಗುತ್ತದೆ. ಮಾನವ ಸಂಪನ್ಮೂಲ ತರಬೇತಿಯಲ್ಲಿ ಮಕ್ಕಳಿಗೆ ಹೆಚ್ಚು ತರಬೇತಿ ನೀಡಲಾಗುತ್ತದೆ. ವಿವಿಧ ಹಂತಗಳಲ್ಲಿ ಸಾಲ ನೀಡಲಾಗುವುದು. ಅದರಲ್ಲಿ ಸಹಾಯಧನ ಸೌಲಭ್ಯಗಳನ್ನು ನೀಡಲಾಗುತ್ತದೆ ಮತ್ತು ಮಾರುಕಟ್ಟೆ ಸಹಾಯ ಯೋಜನೆ ರೂಪದಲ್ಲಿ ಸಹಾಯ ನೀಡಲಾಗುತ್ತದೆ ಎಂದು ಹೇಳಿದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿದರು.

ಸಮಗಾರ ಸಮಾಜದ ಅಧ್ಯಕ್ಷ ರಮೇಶ್ ಮಾನೆ ಮಾತನಾಡಿ, ನಮಗೆ ರಸ್ತೆಯಲ್ಲಿ ಕೆಲಸ ಮಾಡಲಿಕ್ಕೆ ಫುಟ್ ಪಾತ್ ಸಮಸ್ಯೆ ಇದೆ. ಕಾಯಕ ಮಾಡುವುದಕ್ಕೆ ಒಂದು ಸ್ಥಳ ನಿಗದಿ ಮಾಡಬೇಕು ಮತ್ತು ಸಮಗಾರ ಸಮಾಜದಲ್ಲಿ ಹೆಚ್ಚು ಬಡವರಿದ್ದು, ಮನೆ ನೀಡುವುದಕ್ಕೆ ಆದ್ಯತೆ ಕೊಡಿ ಎಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷರಾದ ರತ್ನ ಡಿ. ಉಜ್ಜೇಶ್, ನಾಗರಾಜ್ ಜಮ್ನಹಳ್ಳಿ, ಬಿ. ಮುಗ್ದುಂ, ನಾಗರತ್ನ, ಪ್ರೀತಂ ಬಾಬು ಉಪಸ್ಥಿತರಿದ್ದರು.

# ಏತ ನೀರಾವರಿ ಯೋಜನೆಗೆ ರೈತರು ಸಹಕಾರ ನೀಡಬೇಕು

## ಕಾಮಗಾರಿ ವಿಳಂಬವಾದರೆ ಗುತ್ತಿಗೆದಾರರು ಬ್ಲಾಕ್‌ಲಿಸ್ಟ್‌ಗೆ : ಶಾಸಕ ರೇಣುಕಾಚಾರ್ಯ ಎಚ್ಚರಿಕೆ



ಹೊನ್ನಾಳಿ, ಜ.18- ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ 49 ವಿದ್ಯುತ್ ಟವರ್ ಗಳನ್ನು ಅಳವಡಿಸುವ ಕಾಮಗಾರಿಗೆ ರೈತರು ಸಹಕಾರ ನೀಡಬೇಕು ಎಂದು ಶಾಸಕ ಎಂ.ಪಿ.ರೇಣುಕಾಚಾರ್ಯ ಮನವಿ ಮಾಡಿದರು.

ಬಿದರಗಡ್ಡೆ ಗ್ರಾಮದಿಂದ ಸಾಸ್ವೆಹಳ್ಳಿ ವರೆಗೆ ರೈತರ ಜಮೀನುಗಳಲ್ಲಿ ಹಾದು ಹೋಗುವ 10.9 ಕಿ.ಮೀ. ಟವರ್‌ಗಳನ್ನು ಅಳವಡಿಸುವ ಕಾಮಗಾರಿ ನಡೆಸಲು ರೈತರ ಮನವೊಲಿಸಲು ಸಂಸದರು, ಹೊನ್ನಾಳಿ ಮತ್ತು ಚನ್ನಗಿರಿ ಶಾಸಕರು, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತಿತರೆ ಅಧಿಕಾರಿಗಳ ವಿಶೇಷ ಸಭೆ ನಡೆಯಿತು.

ಅಲ್ಲದೇ, ಹೊನ್ನಾಳಿ, ಭದ್ರಾವತಿ, ಚನ್ನಗಿರಿ, ದಾವಣಗೆರೆ, ಹೊಳಲ್ಕೆರೆ, ಚಿತ್ರದುರ್ಗದವರೆಗೆ 121 ಕೆರೆ ತುಂಬಿಸುವ ಸರ್ಕಾರದ ಮಹತ್ವಾಕಾಂಕ್ಷಿ ಏತ ನೀರಾವರಿ ಯೋಜನೆಗೆ ಯಾವ ರೈತರು ಅಡ್ಡಿಪಡಿಸದೆ ಸಹಕಾರ ನೀಡಬೇಕು, ರೈತರಿಗೆ ಅನ್ಯಾಯ ವಾಗದಂತೆ ಸೂಕ್ತ ಪರಿಹಾರ ನೀಡಲಾಗುವುದು ಎಂದ ಅವರು, ಗುತ್ತಿಗೆದಾರರು ಕಾಮಗಾರಿಯನ್ನುಅನುಷ್ಠಾನಗೊಳಿಸಬೇಕು. ವಿಳಂಬ ಮಾಡಿದರೆ ಅಂತಹ ಗುತ್ತಿಗೆದಾರರನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಲಾಗುವುದು ರೇಣುಕಾಚಾರ್ಯ ಎಚ್ಚರಿಸಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ರೈತರ ಜೀವನಾಡಿ ಕೆರೆ ತುಂಬಿಸುವ ಯೋಜನೆ ಕಾಮಗಾರಿಗೆ ಯಾವ ರೈತರು ಅಡ್ಡಿಪಡಿಸಬಾರದು, ನಾನೊಬ್ಬ ಅಡಿಕೆ ಬೆಳೆದವನಾಗಿ ರೈತರ ಕಷ್ಟ ನನಗೆ ಗೊತ್ತಾಗುತ್ತದೆ. ಸೂಕ್ತ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು. ಸರ್ಕಾರದ ದೊಡ್ಡ ಪ್ರಮಾಣದ ಯೋಜನೆಗೆ ರೈತರು ಸಹಕರಿಸಬೇಕು ಎಂದರು.

ಚನ್ನಗಿರಿ ಶಾಸಕ ಮಾಡಾಳ ವಿರೂಪಾಕ್ಷಪ್ಪ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿದರು.

ಎಸ್ಪಿ ರಿಷ್ಯಂತ್, ಉಪವಿಭಾಗಾಧಿಕಾರಿ ಶ್ರೀಮತಿ ಮಮತ ಹೊಸಗೌಡರ್, ತಹಶೀಲ್ದಾರ್ ಬಸವನಗೌಡ ಕೋಟೂರ, ತಾ.ಪಂ. ಇಓ ರಾಮಭೋವಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿದ್ಯಾನಗರದಲ್ಲಿ ಉಚಿತ ಬೂಸ್ಟರ್ ಡೋಸ್ ಲಸಿಕೆ



ದಾವಣಗೆರೆ, ಜ.18- ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಿಂದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೇತೃತ್ವದ ಬೂಸ್ಟರ್ ಲಸಿಕೆ ನೀಡುವ ಕಾರ್ಯಕ್ರಮವನ್ನು ವಿದ್ಯಾನಗರದ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮುದೇಗೌಡ್ರು ಗಿರೀಶ್, ಪಾಲಿಕೆ ಮಾಜಿ ಸದಸ್ಯ ಬೆಳವನೂರು ನಾಗರಾಜಪ್ಪ, ಬೆಳವನೂರು ಪ್ರಭಣ್ಣ ಹೆಚ್.ಡಿ., ಗುರುಸ್ವಾಮಿ ಗಂಗನಕಟ್ಟೆ, ಶ್ಯಾಗಲೆ ಜಯಣ್ಣ, ಅಣಬೇರು ಗಂಗಣ್ಣ, ಶಾಮನೂರು ಸಿದ್ದಣ್ಣ, ಕೊರಟಿಕೆರೆ ಶಿವಕುಮಾರ್, ಬಿ.ಎಸ್. ಪ್ರಕಾಶ್, ಫುಟ್ಬಾಲ್ ಗಿರೀಶ್, ಶಿವಮೂರ್ತಿ ನೇರ್ಲಿಗಿ, ನಾಗರಾಜ ಸೀಮೆಎಣ್ಣೆ, ಮಧುಸೂದನ ಮರಡಿ, ಲೋಕಿಕೆರೆ ಕೆಂಚಣ್ಣ, ಆರ್.ಜಿ. ರುದ್ರೇಶ್ ಹಾಗೂ ಇತರರು ಈ ಸಂದರ್ಭದಲ್ಲಿದ್ದರು.

# ಮನೆಯಿಂದಲೇ ಕೆಲಸದಿಂದ ಮಹಿಳೆಯರಿಗೆ ಹೊರೆ



ನವದೆಹಲಿ, ಜ. 18 – ಕೊರೊನಾ ಸಮಯದಲ್ಲಿ ಮನೆಯಿಂದ ಕೆಲಸ ಮಾಡುವುದು ಪ್ರಯೋಜನಕಾರಿ ಯಾದರೂ, ಮಹಿಳೆಯರ ಮೇಲೆ ಮೂರು ಪಟ್ಟು ಹೊರೆಗೆ ಕಾರಣವಾಗಿದೆ ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿದ್ದಾರೆ.

ಮನೋರಮ ಇಯರ್‌ಬುಕ್ 2022ನಲ್ಲಿ ಯುವ ಭಾರತೀಯರಿಗೆ ಪತ್ರವೊಂದನ್ನು ಬರೆದಿರುವ ಪ್ರಧಾನಿ, ಮಹಿಳೆಯರು ಈಗಾಗಲೇ ವೇತನ ದೊರೆಯುವ ಕೆಲಸ ಹಾಗೂ ವೇತನ ದೊರೆಯದ ಮನೆ ಕೆಲಸಗಳೆರಡನ್ನೂ ನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ಮಕ್ಕಳ ನಿರ್ವಹಣೆಯ ಹೊರೆಯೂ ಇದೆ ಎಂದವರು ಹೇಳಿದ್ದಾರೆ.

# 27ಕ್ಕೆ ನಗರದಲ್ಲಿ ಟೆನ್ನಿಸ್ ಬಾಲ್ ಮಿನಿ ಕ್ರಿಕೆಟ್ ಟೂರ್ನಮೆಂಟ್

ದಾವಣಗೆರೆ,ಜ.18- ಶ್ರೀ ದುರ್ಗಾಂಬಿಕ ಫ್ರೆಂಡ್ಸ್ ಗ್ರೂಪ್ ಇವರ ಆಶ್ರಯದಲ್ಲಿ ಇದೇ ದಿನಾಂಕ 27 ಮತ್ತು 28 ರಂದು 2 ದಿನಗಳ ಕಾಲ ಪ್ರಥಮ ಬಾರಿಗೆ ಟೆನ್ನಿಸ್ ಬಾಲ್ ಮಿನಿ ಕ್ರಿಕೆಟ್ ಟೂರ್ನಿಮೆಂಟನ್ನು ದೇವರಾಜ ಅರಸು ಬಡಾವಣೆಯ ಈಜು ಕೊಳದ ಬಳಿಯ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

24 ತಂಡಗಳಿಗೆ ಅವಕಾಶವಿದ್ದು, ಪಂದ್ಯದಲ್ಲಿ ಗೆದ್ದ ತಂಡಕ್ಕೆ ಪ್ರಥಮ ಬಹುಮಾನ 20 ಸಾವಿರ, ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ 10 ಸಾವಿರ, ಆಕರ್ಷಕ ಟ್ರೋಫಿ, ತೃತೀಯ ಬಹುಮಾನ ಆಕರ್ಷಕ ಟ್ರೋಫಿ ನೀಡಲಾಗುವುದು ಎಂದು ಪ್ರಶಾಂತ್ (9113044780), ಜೆ.ವಿ. ಸಂತೋಷ್ (6363204316), ಚೇತನ್.ಆರ್ (8105149669) ಡಿ.ವಿ. ವಿನಾಯಕ (9148675186) ತಿಳಿಸಿದ್ದಾರೆ.





# ಬನದ ಹುಣ್ಣಿಮೆ: ಬಳೆ ತೊಟ್ಟು ಸಂಭ್ರಮಿಸಿದ ನೀರೆಯರು

ಹೊನ್ನಾಳಿ, ಜ.18- ಬನದ ಹುಣ್ಣಿಮೆಯಂದು ಬಳೆ ತೊಡುವ ಹಬ್ಬದ ಪ್ರಯುಕ್ತ ಸೋಮವಾರ ಹೊನ್ನಾಳಿ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಬಳೆ ತೊಟ್ಟುಕೊಂಡು ಸಂಭ್ರಮಿಸಿದ ನೀರೆಯರು.

# ಅಗತ್ಯವಿದ್ದಲ್ಲಿ ಮಾತ್ರ ಕೋರ್ಟ್‌ಗೆ ಹಾಜರಾಗುವಂತೆ ಕಕ್ಷಿದಾರರಿಗೆ ಜಿಲ್ಲಾ ನ್ಯಾಯಾಧೀಶರ ಸೂಚನೆ

ದಾವಣಗೆರೆ, ಜ. 18- ಕೋವಿಡ್-19 ರ 3ನೇ ಅಲೆ ಸೋಂಕು ವ್ಯಾಪಕವಾಗಿ ಹರಡುವುದನ್ನು ತಡೆಗಟ್ಟುವಲ್ಲಿ ಸಾರ್ವಜನಿಕರು ಎಲ್ಲ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಸಹಕರಿಸಬೇಕು, ಕಕ್ಷಿದಾರರು ತೀರ ಅತ್ಯಗತ್ಯವಿದ್ದ ಪ್ರಕರಣಗಳಲ್ಲಿ ಮಾತ್ರ ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಮನವಿ ಮಾಡಿದ್ದಾರೆ. ಅಗತ್ಯವಿಲ್ಲದ ಪ್ರಕರಣಗಳಲ್ಲಿ ಕಕ್ಷಿದಾರರು ನ್ಯಾಯಾಲಯಕ್ಕೆ ಹಾಜರಾಗುವ ಅವಶ್ಯಕತೆ ಇಲ್ಲ ಎಂದು ಉಚ್ಚ ನ್ಯಾಯಾಲಯವು ನಿರ್ದೇಶನ ನೀಡಿರುತ್ತದೆ. ಆ ನಿಟ್ಟಿನಲ್ಲಿ ತೀರ ಅತ್ಯಗತ್ಯವಿದ್ದ ಪ್ರಕರಣಗಳಲ್ಲಿ ಮಾತ್ರ ಕಕ್ಷಿದಾರರು ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ ತಿಳಿಸಿದ್ದಾರೆ.

# ಹಳೆ ಬೇತೂರು ರಸ್ತೆಯ ಬನಶಂಕರಿ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಪೂಜೆ



ದಾವಣಗೆರೆ, ಜ.18- ನಗರದ ಹಳೆ ಬೇತೂರು ರಸ್ತೆ ಶ್ರೀ ಬನಶಂಕರಿ ದೇವಸ್ಥಾನದಲ್ಲಿ 29ನೇ ವರ್ಷದ ಬನದ ಹುಣ್ಣಿಮೆಯ ಅಂಗವಾಗಿ ಇಂದು ಬೆಳಿಗ್ಗೆ ಶ್ರೀ ಬನಶಂಕರಿ ದೇವಿಗೆ ವಿಶೇಷ ಪೂಜೆ ಮತ್ತು ಹೂವಿನ ಅಲಂಕಾರವನ್ನು ಮಾಡಲಾಗಿತ್ತು. ರಥೋತ್ಸವದ ಬದಲು ಪಾಲಿಕಿ ಉತ್ಸವ ನಡೆಸಲಾಯಿತು.

# ಹರಿಹರ ತಾಲ್ಲೂಕಿನಲ್ಲಿ 40 ಜನರಿಗೆ ಕೊರೊನಾ ಪಾಸಿಟಿವ್

ಮಲೇಬೆನ್ನೂರು, ಜ.18- ದಿನೇ ದಿನೇ ಕೊರೊನಾ ಸೋಂಕು ಹೆಚ್ಚಾಗುತ್ತಿದ್ದು, ಹರಿಹರ ತಾಲ್ಲೂಕಿನಲ್ಲಿ ಮಂಗಳವಾರ 40 ಜನರಿಗೆ ಸೋಂಕು ದೃಢಪಟ್ಟಿದೆ. ಮಂಗಳವಾರ ಬೆಳಗಿನ ಮಾಹಿತಿ ಪ್ರಕಾರ 96 ಸಕ್ರಿಯ ಕೇಸ್‌ಗಳಿದ್ದು, ಈ ಪೈಕಿ ಮೂವರು ದಾವಣಗೆರೆ ಸಿಟಿ ಆಸ್ಪತ್ರೆಯಲ್ಲಿ ಮತ್ತು ಇಬ್ಬರು ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಉಳಿದ 91 ಜನ ಹೋಂ ಐಸೋಲೇಷನ್‌ನಲ್ಲಿದ್ದಾರೆ. ಸೋಂಕಿತರಿಗೆ ಲಘು ಪ್ರಮಾಣದ ಕೆಮ್ಮು, ಶೀತ ಇದ್ದು ಎಲ್ಲರೂ ಆರಾಮಾಗಿದ್ದಾರೆ ಎಂದು ತಾಲ್ಲೂಕು ಹಿರಿಯ ಆರೋಗ್ಯ ವಿಸ್ತರಣಾಧಿಕಾರಿ ಎಂ.ಉಮ್ಮಣ್ಣ ತಿಳಿಸಿದ್ದಾರೆ.

# ಅದಿತಿ ಆಚಾರ್ಯಗೆ 'ನಾಟ್ಯಸಿರಿ' ಪ್ರಶಸ್ತಿ




ದಾವಣಗೆರೆ,ಜ.18- ಅಂತರರಾಷ್ಟ್ರೀಯ ಖ್ಯಾತಿಯ ಬಾಲ ಪ್ರತಿಭೆ ಅದಿತಿ ಆಚಾರ್ಯ ಅವರಿಗೆ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ 'ನಾಟ್ಯಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕುವೆಂಪು ಕನ್ನಡ ಭವನದಲ್ಲಿ ಜರುಗಿದ ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಷ್ಟಾವಧಾನಿ ಮೈಸೂರಿನ ಡಾ. ಕಬ್ಬಿನಾಲೆ ವಸಂತ ಭಾರಧ್ವಾಜ್, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ, ಜಾನಪದ ತಜ್ಞ ಡಾ. ಎಂ.ಜಿ.ಈಶ್ವರಪ್ಪ, ಕಲಾಕುಂಚದ ಸಾಲಿಗ್ರಾಮ ಗಣೇಶ್‌ಶೆಣೈ, ಜ್ಯೋತಿ ಗಣೇಶ್‌ಶೆಣೈ ಉಪಸ್ಥಿತರಿದ್ದರು.

# ಲಸಿಕೆ ಕೊಡಿ, ಹಳ್ಳಿಗಳಿಗೆ ಹೊರಡಿ

(1ನೇ ಪುಟದಿಂದ) ಕೋವಿಡ್ ಪರಿಸ್ಥಿತಿ ನಿಭಾಯಿಸುವಲ್ಲಿ ಯಶಸ್ವಿಯಾಗಿದ್ದೇವೆ. ಮುನ್ನೆಚ್ಚರಿಕಾ ಕ್ರಮಗಳು ಉತ್ತಮವಾಗಿದ್ದರೆ ಕೋವಿಡ್ ಮೂರನೇ ಅಲೆ ಏರುಗತಿ ತಲುಪಿದರೂ ಆತಂಕ ಪಡದೇ ಯಶಸ್ವಿಯಾಗಿ ಮೂರನೇ ಅಲೆ ನಿಭಾಯಿಸಬಹುದು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte